ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2016 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 1
ಪುಟ : 12
ಬೆಲೆ : ₹ 10/–




A Journal of Karnataka State Secondary Teachers' Association

# ಸಂಪಾದಕೀಯ

ಶಿಕ್ಷಕ ಮಿತ್ರರು ಹಾಗೂ ವಿದ್ಯಾರ್ಥಿಗಳಿಗೆ ದಸರ, ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಅಕ್ಟೋಬರ್ ತಿಂಗಳಿನಲ್ಲಿ ಬಂದಿರುವ ನಾಡಹಬ್ಬ ಶರನ್ನವರಾತ್ರಿ ಹಾಗೂ ಕನ್ನಡ ರಾಜ್ಯೋತ್ಸವವನ್ನು ಕನ್ನಡಿಗರು ಉತ್ಸಾಹ, ಸಂಭ್ರಮಗಳಿಂದ ಆಚರಿಸಬೇಕು. ಹಿಂದಿನ ರಾಜ ಮಹಾರಾಜರುಗಳು ನಡೆಸಿದ ವೈಭವದ ದಸರೆಯ ಉತ್ಸವ ಈಗ ಇಲ್ಲದಿದ್ದರೂ ನಾಡಿನ ಹಿರಿಮೆ–ಗರಿಮೆಗಳನ್ನು ಕಣ್ತುಂಬಿಕೊಂಡು ನಾಡಿನ ಬಗೆಗಿನ ಅಭಿಮಾನವನ್ನು ಹೆಚ್ಚಿಸಿಕೊಳ್ಳಲು ಮೈಸೂರು ದಸರ ಒಳ್ಳೆಯ ಅವಕಾಶವನ್ನು ಒದಗಿಸುತ್ತದೆ. ಇದರೊಂದಿಗೆ ಭಾರತದ ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತಗಳು ರೂಪುಗೊಂಡು, ಕನ್ನಡ ಮಾತನಾಡುವ ಪ್ರದೇಶಗಳು ಏಕೀಕರಣಗೊಂಡು 'ಕರ್ನಾಟಕ ಏಕೀಕರಣ'ದ ಕನಸು ನನಸಾದ ನೆನಪಿನಲ್ಲಿ ನಡೆಯುವ 'ಕನ್ನಡ ರಾಜ್ಯೋತ್ಸವ'ವು ಕರ್ನಾಟಕದ ಮತ್ತೊಂದು ಪ್ರಮುಖ ನಾಡಹಬ್ಬ. ಬೆಳಕಿನ ಹಬ್ಬ ದೀಪಾವಳಿಯನ್ನೂ ಈ ತಿಂಗಳಿನಲ್ಲಿಯೇ ಆಚರಿಸುವವರಿದ್ದೇವೆ. ಈ ಎಲ್ಲಾ ಹಬ್ಬಗಳನ್ನು ನಾವೆಲ್ಲರೂ ಸಂಭ್ರಮ, ಉತ್ಸಾಹದಿಂದ ಆಚರಿಸಿ ಖುಷಿಪಡುವ ಪರಿಸ್ಥಿತಿಯಲ್ಲಿ ಇದ್ದೇವೆಯೇ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.

ಪ್ರಕೃತಿಯ ಮುನಿಸಿನಿಂದಾಗಿ ರಾಜ್ಯದ ಜಲಾನಯನ ಪ್ರದೇಶಗಳಲ್ಲಿ ಮಳೆಯಾಗದೆ, ನೆರೆ ರಾಜ್ಯದವರಿಗೆ ನೀರು ಪೂರೈಸಲಾಗದೆ, ನ್ಯಾಯಾಂಗದ ಅವಕೃಪೆಗೆ ಒಳಗಾಗಿ ರಾಜ್ಯ ಮುಂದೆ ಏನೆಲ್ಲ ಸಂಕಷ್ಟಗಳನ್ನು ಎದುರಿಸಬೇಕಾಗುವುದೋ ಎಂಬ ಆತಂಕ ಒಂದು ಕಡೆಯಾದರೆ, ಮುಂಬರುವ ದಿನಗಳಲ್ಲಿ ನಾವೆಲ್ಲಾ ಕುಡಿಯುವ ನೀರೂ ಸೇರಿದಂತೆ ಏನೆಲ್ಲಾ ಬವಣೆಗಳನ್ನು ಎದುರಿಸಬೇಕಾಗುತ್ತದೋ ಎಂಬ ಆತಂಕ ಇನ್ನೊಂದೆಡೆ. ಈ ಮಧ್ಯೆ ನಾಡಿನ ಹಲವೆಡೆ ಅತಿವೃಷ್ಟಿಯ ಪರಿಣಾಮವನ್ನೂ ಎದುರಿಸಬೇಕಾಗಿದೆ. ಇವೆಲ್ಲದರ ನಡುವೆಯೂ ನಾವು ಅರ್ಪಿಸುವ ಪೂಜೆಯನ್ನು ಸ್ವೀಕರಿಸಿ, ನಾಡು ಎದುರಿಸುತ್ತಿರುವ ಎಲ್ಲ ಸಂಕಷ್ಟಗಳನ್ನೂ ನಾಡದೇವಿ ದೂರಮಾಡಿ, ಎಲ್ಲರಲ್ಲೂ ನೆಮ್ಮದಿಯನ್ನು ತರುತ್ತಾಳೆಂಬ ಸದಾಶಯದಿಂದ ನವರಾತ್ರಿಯ ಉತ್ಸವವನ್ನು ಶ್ರದ್ಧೆ, ಆಸಕ್ತಿ, ಉತ್ಸಾಹದಿಂದ ಆಚರಿಸೋಣ.

ಅಕ್ಟೋಬರ್ ತಿಂಗಳಿನಿಂದ 'ಶಿಕ್ಷಕ ಸಮಾಚಾರ'ದ 39ನೆಯ ಸಂಚಿಕೆ ಪ್ರಾರಂಭ ವಾಗುತ್ತಿದೆ. ಸತತವಾಗಿ 39 ವರ್ಷಗಳ ಕಾಲ ಪತ್ರಿಕೆ ನಡೆದುಕೊಂಡು ಬರುತ್ತಿರುವುದು ಗಮನಾರ್ಹ ಸಾಧನೆಯೇ ಸರಿ. ಹೊಸ ಸಂಪುಟದ ಆರಂಭದ ಸಂದರ್ಭದಲ್ಲಿ ಮೂರು ಹೊಸ ಶೀರ್ಷಿಕೆಗಳ ಮಾಲಿಕೆಯನ್ನು ಪರಿಚಯಿಸಲು ಪ್ರಯತ್ನಿಸುತ್ತಿದ್ದೇವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಶಿಕ್ಷಣ ಸೌರಭ' ; ಶಿಕ್ಷಣ ಸಂಸ್ಥೆಗಳನ್ನು ಪರಿಚಯಿಸುವ 'ದಾರಿದೀಪ' ಹಾಗೂ ಆದರ್ಶ ಶಿಕ್ಷಕರನ್ನು ನೆನಪಿಸಿಕೊಳ್ಳುವ 'ಹೆಜ್ಜೆಗುರುತು' ಮಾಲಿಕೆಗಳು. ಈ ಮಾಲಿಕೆಗಳನ್ನು ಕುರಿತು ಹಾಗೂ ಪತ್ರಿಕೆಯನ್ನು ಇನ್ನೂ ಉತ್ತಮವಾಗಿ ಹೊರತರಲು ಓದುಗರು ಉತ್ತಮ ಸಲಹೆಗಳನ್ನು "ಶಿಕ್ಷಕ ಸಮಾಚಾರ'ಕ್ಕೆ ಪತ್ರಮುಖೇನ ಕಳುಹಿಸಬೇಕೆಂದು ವಿನಂತಿಸಲಾಗಿದೆ. ಅಥವಾ Akss1950@gmail.com ಮಿಂಚಂಚೆ ವಿಳಾಸಕ್ಕೆ ಮಿಂಚಂಚೆಯನ್ನೂ (E- mail) ಕಳುಹಿಸಬಹುದು.

ಭಕ್ತಿಯ ಪ್ರತಿಪಾದನೆಯೇ ಪ್ರಧಾನವಾಗಿದ್ದರೂ, ಸಮಾಜವನ್ನು ತಿದ್ದುವ ಕೆಲಸವನ್ನೂ ಮಾಡಿದ ಹಾಗೂ ಉತ್ತಮ ಸಾಹಿತ್ಯವನ್ನೂ ನೀಡಿ ಕನ್ನಡ ಸಾಹಿತ್ಯಕ್ಕೆ ತಮ್ಮ ವಿಶಿಷ್ಟ ಕಾಣಿಕೆಗಳನ್ನು ಕೀರ್ತನೆಗಳ ಮೂಲಕ ನೀಡಿದವರು ದಾಸರು. ದಾಸರೆಂದ ಕೂಡಲೇ ನೆನಪಾಗುವುದು ದಾಸಶ್ರೇಷ್ಠರಾದ ಪುರಂದರ–ಕನಕರು. ಕನಕನ ನಿಷ್ಕಲ್ಮಷ, ನೈಜ ಭಕ್ತಿಯನ್ನು ಗುರುಗಳಾದ ವ್ಯಾಸರಾಯರೇ ಮೆಚ್ಚಿದರು. ಕನಕದಾಸರು ಕೀರ್ತನೆಗಳನ್ನಷ್ಟೇ ಅಲ್ಲದೆ 'ನಳಚರಿತ್ರೆ', 'ರಾಮಧಾನ್ಯಚರಿತೆ', 'ಮೋಹನ ತರಂಗಿಣಿ'ಯಂತಹ ಶ್ರೇಷ್ಠ ಕಾವ್ಯಗಳನ್ನೂ ರಚಿಸಿದರು. ಇಂತಹ ಶ್ರೇಷ್ಠ ಸಂತ, ಕವಿ ಕನಕದಾಸರ ಜಯಂತಿ ನವೆಂಬರ್ 17ರಂದು. ಈ ಸಂದರ್ಭದಲ್ಲಿ ಕನಕದಾಸರ ಕೃತಿಗಳ ಅವಲೋಕನ ಉಚಿತವಲ್ಲವೇ?

ಕನ್ನಡ ಸಾಹಿತ್ಯವನ್ನು ತಮ್ಮ ವಿದ್ವತ್ತು, ಪ್ರತಿಭೆಗಳಿಂದ ಶ್ರೀಮಂತಗೊಳಿಸಿದವರು ಅನೇಕರು. ಅವರಲ್ಲಿ ಪ್ರಾತಃಸ್ಮರಣೀಯರು ಟಿ.ಎಸ್. ವೆಂಕಣ್ಣಯ್ಯನವರು. ಹಲವಾರು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಉತ್ತಮವಾದ ಮುನ್ನುಡಿಗಳನ್ನೂ ಬರೆದಿದ್ದಾರೆ. ಚಲಿಸುವ ನಿಘಂಟು ಎಂದೇ ಖ್ಯಾತರಾಗಿದ್ದ ಡಾ|| ಡಿ.ಎಲ್. ನರಸಿಂಹಾಚಾರ್ಯರು ಶಬ್ದಮಣಿದರ್ಪಣ, ಗ್ರಂಥಸಂಪಾದನೆಯಂತಹ ಶಾಸ್ತ್ರಗ್ರಂಥಗಳನ್ನು ಸಂಪಾದಿಸುವುದರೊಂದಿಗೆ 'ಪಂಪಭಾರತ' ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದರು. 'ಪಂಪಭಾರತದೀಪಿಕೆ'ಯನ್ನೂ ರಚಿಸಿದರು. ಕೇವಲ ಇಂಟರ್‌ಮೀಡಿಯೆಟ್‌ವರೆಗೆ ವಿದ್ಯಾಭ್ಯಾಸ ಮಾಡಿದರೂ ಜ್ಞಾನಪೀಠ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಅಪಾರ ವಿದ್ವತ್ತಿನ ಪ್ರತಿಭೆ ಡಾ|| ಶಿವರಾಮಕಾರಂತರದು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ನಿಘಂಟು, ವಿಶ್ವಕೋಶ, ಕಾದಂಬರಿ . . . ಹೀಗೆ ಎಲ್ಲದರಲ್ಲೂ ತಮ್ಮ ಕಾಣಿಕೆ ನೀಡಿದವರು ಕಾರಂತರು. ಅಂತೆಯೇ ವಚನ ಸಾಹಿತ್ಯದಲ್ಲಿ ಅಪಾರ ಸಂಶೋಧನೆ ಮಾಡಿದ ವಿದ್ವಾಂಸರುಗಳು ಡಾ|| ಎಲ್. ಬಸವರಾಜು ಹಾಗೂ ಚನ್ನಪ್ಪ ಉತ್ತಂಗಿ. ಕಾದಂಬರಿ ಕ್ಷೇತ್ರದಲ್ಲಿ ಮರೆಯಲಾರದ ಹೆಸರು ಕೆರೂರು ವಾಸುದೇವಾಚಾರ್ಯರು ಹಾಗೂ ಬಸವರಾಜ ಕಟ್ಟೀಮನಿ. ಈ ಎಲ್ಲ ಮಹನೀಯರು ಹುಟ್ಟಿದ್ದು ಅಕ್ಟೋಬರ್ ತಿಂಗಳಲ್ಲಿ. ಇವರ ಕೃತಿಗಳ ಅವಲೋಕನ ಮಾಡುವುದರ ಮೂಲಕ ನಮ್ಮ ನಮನ ಸಲ್ಲಿಸೋಣ.

ಸಂಪಾದಕರು

## ಸೂಕ್ತಿ

ಆತ್ಮನೋಖವಮತಾಂ ಬ್ರೂಯುಃ
ಉತ್ತಮಾ ಅಪಿ ಸರ್ವಶಃ ।
ಕದಾಚಿದೇವ ಸ್ವಗುಣಾನ್
ಸ್ನಿಗ್ಧೇಷ್ವೇವ ಹಿ ಸಾಧವಃ ॥

ಎಲ್ಲರಿಗಿಂತ ಉತ್ತಮವಾಗಿದ್ದರೂ ವಿದ್ವಾಂಸರು ಅನೇಕ ಸಾರಿ ವಿನಮ್ರಭಾವದಿಂದ ತಾವು ಸಣ್ಣವರು ಎನ್ನುತ್ತಾರೆ. ಕೆಲವೊಮ್ಮೆ ಮಾತ್ರ ತಮ್ಮ ಉತ್ತಮತ್ವಕ್ಕೆ ಕಾರಣವಾದ ಸದ್ಗುಣಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಇದು ದೊಡ್ಡವರ ಸ್ವಭಾವ. ಹಾಗೆ ತಮ್ಮಲ್ಲಿರುವುದನ್ನು ಹೇಳಿಕೊಳ್ಳುವುದರಿಂದ ಅಹಂಕಾರಕ್ಕೆ ಅವಕಾಶವಿಲ್ಲ. ಇಲ್ಲದ್ದನ್ನು ಹೇಳಿಕೊಂಡರೆ ಮಾತ್ರ ದೋಷ ಎಂದೆನಿಸುತ್ತದೆ.

- ಭಾಗವತ ತಾತ್ಪರ್ಯ

## ಪರಿವಿಡಿ


- ವಿಜ್ಞಾನ ಭೂಮಿ ಭಾರತ 3
- ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ 5
- ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ – 1 6
- ಸುತ್ತೋಲೆ 7
- ಅಖಿಲ ಭಾರತ ಮಹಿಳಾ ಸಮನ್ವಯ ಸಭೆ 8
- ಭಾರತದಲ್ಲಿನ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಅವಲೋಕನ 11
- ಚಿತ್ರಸುದ್ದಿ 12

# ವಿಜ್ಞಾನ ಭೂಮಿ ಭಾರತ

■ ಅ.ಪು. ನಾರಾಯಣಪ್ಪ
ನಿವೃತ್ತ ಪ್ರಾಂಶುಪಾಲರು, ಹಾಗೂ ಕ.ರಾ.ಮಾ.ಶಿ
ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ

ಭಾರತ ಜಗತ್ತಿನ ಪ್ರಾಚೀನ ರಾಷ್ಟ್ರಗಳಲ್ಲಿ ಒಂದು. ಇತಿಹಾಸಕಾರರೇ ಗುರುತಿಸುವಂತೆ ನಮ್ಮ ದೇಶಕ್ಕೆ ಎಂಟರಿಂದ ಹತ್ತು ಸಾವಿರ ವರ್ಷಗಳಷ್ಟು ಸುದೀರ್ಘವಾದ ಸುಸಂಸ್ಕೃತ ಮತ್ತು ನಾಗರೀಕ ಜೀವನದ ಇತಿಹಾಸವಿದೆ. ಇಷ್ಟೊಂದು ಸುದೀರ್ಘ ಕಾಲದಲ್ಲಿ ನಮ್ಮ ಪ್ರಾಚೀನರು ಕೇವಲ ಕಾಡುಮೇಡುಗಳಲ್ಲಿ ಗೆಡ್ಡೆಗೆಣಸು ತಿನ್ನುತ್ತಾ ತಪಸ್ಸನ್ನು ಆಚರಿಸುತ್ತಾ ಕಾಲ ಕಳೆಯಲಿಲ್ಲ. ಅವರು ಈ ಬ್ರಹ್ಮಾಂಡದಲ್ಲಿ ಅಡಗಿರುವ ಪ್ರಕೃತಿಯ ಸೋಜಿಗಗಳನ್ನು, ವೈಜ್ಞಾನಿಕ ಸಂಗತಿಗಳನ್ನು ಅನ್ವೇಷಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅದರ ಫಲವಾಗಿಯೇ ನಮಗೆ ಸಾಕಷ್ಟು ಆಧುನಿಕ ವಿಜ್ಞಾನವೂ ಒಪ್ಪಿಕೊಳ್ಳುವಂತಹ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ಪ್ರಾಚೀನರು ನೀಡಿದ್ದಾರೆ. ಹೀಗೆ ಭಾರತ ಒಂದು ವಿಜ್ಞಾನಭೂಮಿಯಾಗಿದೆ.

ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಪುರಾಣಗಳು, ಸಂಹಿತೆಗಳು, ಬೌದ್ಧ-ಜೈನ ಗ್ರಂಥಗಳು ಹೀಗೆ ಎಲ್ಲವೂ ಒಂದಿಷ್ಟು ವೈಜ್ಞಾನಿಕ ವಿಚಾರವನ್ನು ಹೇಳುತ್ತವೆ. ಕೆಲವು ಗ್ರಂಥಗಳಲ್ಲಿ ದೇಶ, ಕಾಲ, ಪರಿಸರ ಕುರಿತಂತೆ ಭೌಗೋಳಿಕ ಸನ್ನಿವೇಶಗಳನ್ನು ಯಥಾವತ್ತಾಗಿ ಹೇಳಲಾಗಿದೆ. ಉದಾಹರಣೆಗೆ ವಿಷ್ಣು ಪುರಾಣದ ಮೊದಲ ಸಂಪುಟದ ದ್ವಿತೀಯಾಂಶದಲ್ಲಿ ಭೂಮಿಯ ಅದರಲ್ಲೂ ಭಾರತದ ಭೌಗೋಳಿಕ ಸನ್ನಿವೇಶವನ್ನು; ಸಪ್ತದ್ವೀಪಗಳು, ಸಮುದ್ರಗಳು, ಪರ್ವತಗಳು, ಯಾವ ಯಾವ ಪರ್ವತ ಎಷ್ಟು ಉದ್ದ, ಅಗಲ ಮತ್ತು ಯಾವ ದಿಕ್ಕಿನಲ್ಲಿದೆ, ವಿವಿಧ ರೀತಿಯ ವೃಕ್ಷಗಳು, ಅವು ಎಲ್ಲಿ ಬೆಳೆಯುತ್ತವೆ ಮುಂತಾದ ವಿವರಗಳಿವೆ. ಅಲ್ಲದೆ ಭಾರತದೇಶದ ವರ್ಣನೆ, ವಿವಿಧ ಪ್ರದೇಶಗಳು, ಅಲ್ಲಿ ವಾಸಿಸುವ ಜನಗಳು, ಅವರ ಲಕ್ಷಣಗಳು ವಿವರಿಸಲ್ಪಟ್ಟಿವೆ. ಯಾವ ಯಾವ ನದಿಗಳು ಎಲ್ಲಿ ಹುಟ್ಟುತ್ತವೆ, ಹರಿಯುವ ದಿಕ್ಕು, ಸೇರುವ ಸಮುದ್ರ, ಚಲಿಸುವ ದೂರ ಮುಂತಾದವುಗಳನ್ನು ಹೇಳಲಾಗಿದೆ. ಕೇವಲ ಇದು ಉದಾಹರಣೆಗೆ ಮಾತ್ರ. ಒಟ್ಟು ಇಂತಹ ವಿವರಣೆಯ 182 ಶ್ಲೋಕಗಳನ್ನು ಕಾಣಬಹುದು.

## ವೈಜ್ಞಾನಿಕ ಚಿಂತನೆಯೇ ಪ್ರಧಾನ

ಪ್ರಾಚೀನರ ಯಾವುದೇ ಗ್ರಂಥಗಳನ್ನು ನೋಡಿದರೂ ಅಲ್ಲಿ ವಿಜ್ಞಾನದ ಚಿಂತನೆ ಗೋಚರಿಸುತ್ತದೆ. ಈಚೆಗೆ 'ಆಚಾರವಿಧಿ' ಎಂಬ ಒಂದು ಪುಸ್ತಕ ಗಮನಿಸಿದೆ. ಅದರಲ್ಲಿ ಮೊದ ಮೊದಲು ಧರ್ಮಾಚರಣೆಗಳ ಬಗ್ಗೆ ಹೇಳಿದರೂ ಅದರ ಐದನೇ ಅಧ್ಯಾಯವು ಆಹಾರಸೇವನೆಗೆ ಸಂಬಂಧಿಸಿದುದಾಗಿದೆ. ಯಾವಾಗ ಊಟ ಮಾಡಬೇಕು? ಯಾವ ಯಾವ ಪಾತ್ರೆ ಅಥವಾ ಎಲೆಗಳಲ್ಲಿ ಊಟ ಮಾಡಬೇಕು? ಯಾವ ಸ್ಥಿತಿಯಲ್ಲಿ ಕುಳಿತು ಊಟ ಮಾಡಬೇಕು? ದೋಷವಿಲ್ಲದ ಆಹಾರಗಳು ಯಾವುವು? ಯಾವ ಆಹಾರಗಳು ಶೀಘ್ರ ಕೆಡುತ್ತವೆ? ಯಾವ ಆಹಾರ ಮಾರನೇದಿನವೂ ಭೋಜನಯೋಗ್ಯ? ಯಾವ ಯಾವ ಪದಾರ್ಥಗಳು ಯಾವ ಯಾವ ಪಾತ್ರೆಯಲ್ಲಿಟ್ಟರೆ ಕೆಡುತ್ತವೆ? ರಾತ್ರಿ ಹಾಲನ್ನು ಏಕೆ ಉಣ್ಣಬೇಕು? ಆಯುರ್ವೃದ್ಧಿ, ಆಯುಃಕ್ಷೀಣ ಯಾವುದರಿಂದ? ಯಾವ ಪದಾರ್ಥಗಳನ್ನು ಕೈಯಿಂದ ಬಡಿಸಬಾರದು? ಕೈಯಿಂದ ಬಡಿಸಬಹುದಾದ್ದು ಯಾವುದು? ಹೀಗೆ ಆಹಾರವಿಜ್ಞಾನದ ಸಾಕಷ್ಟು ಅಂಶಗಳನ್ನು ಕಾಣುತ್ತೇವೆ.

ಅನೇಕ ಬುದ್ಧಿಜೀವಿಗಳು ಹೀಗಳೆಯುವಂತೆ ನಮ್ಮ ಪ್ರಾಚೀನರು ಕೇವಲ ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಿದವರಲ್ಲ. ಅದರ ಜೊತೆ ಜೊತೆಗೇ ವೈಜ್ಞಾನಿಕ ಚಿಂತನೆಯನ್ನೂ ಇಟ್ಟುಕೊಂಡು ಪ್ರಕೃತಿಯ ರಹಸ್ಯವನ್ನು ಭೇದಿಸಲು ಪ್ರಯತ್ನಿಸಿದ್ದಾರೆ. ಅಂತೆಯೇ ತಮ್ಮ ಅನ್ವೇಷಣೆಯ ಮನುಷ್ಯನ ಸಹಜೀವನಕ್ಕೆ, ಅಂದರೆ ಅವನು ಪ್ರಕೃತಿಯೊಡನೆ ಹೇಗೆ ತಾದಾತ್ಮ್ಯಭಾವದಿಂದ ಬದುಕಬೇಕು ಎಂಬುದರ ಕಡೆಗೂ ಅಪಾರ ಗಮನ ಹರಿಸಿದ್ದಾರೆ. ಮನುಷ್ಯನೂ ಸೇರಿ ಸಕಲ ಜೀವರಾಶಿಗಳೂ ಪಂಚಭೂತಾತ್ಮಕವಾದುದು. ಪಂಚಭೂತಗಳು; ಪೃಥ್ವಿ, ನೀರು, ಅಗ್ನಿ, ವಾಯು ಮತ್ತು ಆಕಾಶ. ಸಕಲ ಜೀವಿಗಳಲ್ಲೂ ಪರಮಾತ್ಮನಿದ್ದಾನೆ. 'ಅಣುರೇಣು ತೃಣಕಾಷ್ಠಗಳಲ್ಲಿ' ಎಂಬುದು ಕೇವಲ ನಂಬಿಕೆಯಲ್ಲ, ವೈಜ್ಞಾನಿಕ ಸತ್ಯ. ಅಂತೆಯೇ ಸಕಲ ಜೀವರಾಶಿಗಳೂ ಪುನಃ (ಸಾವು ಉಂಟಾದಾಗ) ಅದೇ ಪಂಚಭೂತಗಳಲ್ಲಿ ಲೀನವಾಗುತ್ತವೆ ಎಂಬ ವಿಚಾರವೂ 'ವಸ್ತು ಪರಿವರ್ತನೆ' ತತ್ತ್ವವನ್ನು ಆಧರಿಸಿದೆ.

## ಆಯುರ್ವೇದ

ನಮ್ಮ ಪೂರ್ವಜರು ಭೂಮಿಯ ಮೇಲಿನ ತಮ್ಮ ಸುತ್ತಲಿನ ಜೀವಿಗಳ ಕುರಿತಾಗಿ ಚಿಂತನೆ, ಅನ್ವೇಷಣೆ ನಡೆಸಿದ್ದರ ಫಲವಾಗಿ ಪ್ರಾಣಿಗಳ ವರ್ಗೀಕರಣ, ಸಸ್ಯಗಳ ವರ್ಗೀಕರಣ, ವಿವಿಧ ಪ್ರಾಣಿ ಸಸ್ಯಪ್ರಭೇದಗಳು ಬೆಳಕು ಕಂಡವು. ಸಸ್ಯಗಳ ಕುರಿತಾಗಿ ಗಿಡಮೂಲಿಕಾ ಶಾಸ್ತ್ರ ಮುಂದೆ 'ಆಯುರ್ವೇದ ವಿಜ್ಞಾನ'ದಲ್ಲಿ ಸಸ್ಯಗಳ ಔಷಧೀಯ ಮಹತ್ತ್ವವನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಇದರಿಂದ ಔಷಧಶಾಸ್ತ್ರ, ರೋಗಚಿಕಿತ್ಸಾ ಶಾಸ್ತ್ರ, ರೋಗನಿಧಾನ (ಪತ್ತೆ ಹಚ್ಚುವುದು), ಚಿಕಿತ್ಸಾ ವಿಧಾನ ರೂಪುಗೊಂಡವು. ಈ ಕುರಿತಾದ ಚರಕಸಂಹಿತೆ, ಸುಶ್ರುತ ಸಂಹಿತೆಯಂತಹ ಆಯುರ್ವೇದೀಯ ಗ್ರಂಥಗಳು ರಚನೆಯಾಗಿ ಇಂದಿಗೂ ತಮ್ಮ ಪ್ರಸ್ತುತತೆಯನ್ನು ಉಳಿಸಿಕೊಂಡಿವೆ. ಈಗಂತೂ ಆಯುರ್ವೇದೀಯ ಔಷಧಿಗಳ ಮಹತ್ತ್ವ ವಿಶ್ವವ್ಯಾಪಿಯಾಗುತ್ತಿದೆ.

## ಯೋಗ

ಮನುಷ್ಯನಿಗೆ ತನ್ನ ಯಾವುದೇ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಆಯುಸ್ಸು ಮತ್ತು ದೈಹಿಕ, ಮಾನಸಿಕ ಆರೋಗ್ಯ

ಪುಟ 4 ಕ್ಕೆ ➤

➢ ಪುಟ 3 ರಿಂದ..... ಭಾರತ

ಅತ್ಯಾವಶ್ಯಕ. ಕೇವಲ ಔಷಧ ಸೇವನೆಯಿಂದ ರೋಗವನ್ನು ಗುಣಪಡಿಸಬಹುದು. ಆದರೆ ದೀರ್ಘಾಯುಷ್ಯ ಮತ್ತು ಆರೋಗ್ಯಪೂರ್ಣ ಶರೀರ ಅದರಿಂದ ಸಾಧ್ಯವಿಲ್ಲ. ಈ ಅಂಶದ ಆಳವಾದ ಚಿಂತನೆ ಮತ್ತು ಪರಿಹಾರ ಕಂಡುಹಿಡಿಯುವ ಅನ್ವೇಷಣೆಯ ಫಲವೇ ಯೋಗದ ಆವಿಷ್ಕಾರ. ನಮ್ಮ ಪೂರ್ವಜರ ಶಾರೀರಿಕ ವೈಜ್ಞಾನಿಕ ಚಿಂತನೆ ಹೀಗಿತ್ತು; 'ಶತಾಯುರ್ವಜ್ರದೇಹಾಯ' ಅಂದರೆ ನೂರು ವರ್ಷ ಆಯುಸ್ಸು, ಗಟ್ಟಿಮುಟ್ಟಾದ ದೇಹ. ಅಂತೆಯೇ 'ಯೋಗಃ ಚಿತ್ತವೃತ್ತಿನಿರೋಧಃ', 'ಯೋಗಃ ಕರ್ಮಸು ಕೌಶಲಂ', 'ಶರೀರಮಾದ್ಯಂ ಖಲು ಧರ್ಮಸಾಧನಂ' ಮುಂತಾದ ಉಕ್ತಿಗಳು ದೃಢಕಾಯವಾದ ಶರೀರ, ಆರೋಗ್ಯವಂತ ಮನಸ್ಸು, ಸುದೀರ್ಘ ಬಾಳು, ಇವನ್ನು ಸಾಧಿಸಲು ರೋಗ ಬಾರದಂತಹ ದೃಢ ಶರೀರ, ಅಗತ್ಯವಾದರೆ ಔಷಧ ಈ ಎರಡರ ಸಮನ್ವಯ; ಅದೇ ಯೋಗ ಮತ್ತು ಆಯುರ್ವೇದ. ಇಂದು ಯೋಗವೂ ಕೂಡ ವಿಶ್ವಪ್ರಿಯವಾಗುತ್ತಿದೆ. ಯೋಗ–ಆಯುರ್ವೇದದ ಸಮತೋಲನ ಉಳ್ಳವರು ಜೀವನದ ಸಮನ್ವಯವನ್ನೂ ಸಾಧಿಸಿರುವ ಉದಾಹರಣೆ ಈಗ ಸಾಕಷ್ಟಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಋಷಿಮುನಿಗಳು ಈ ಮಾರ್ಗದಿಂದಲೇ ಪೂರ್ಣಾಯುಸ್ಸು ಪಡೆದರು ಎಂಬುದು ಸರ್ವವಿದಿತ.

## ಗಣಿತದ ಹುಟ್ಟು

ಪ್ರಾಚೀನರು ಪ್ರಕೃತಿಯೊಡನೆ ಬೆಟ್ಟ, ಗುಡ್ಡ, ನದಿ, ಕಾನನ, ಪರ್ವತಗಳಲ್ಲಿ ಬದುಕನ್ನು ಪ್ರಾರಂಭಿಸಿದರು. ಕೃತಜ್ಞತೆಯ ಕುರುಹಾಗಿ ಪ್ರಕೃತಿಯ ಆರಾಧನೆಯನ್ನು ಯಜ್ಞಯಾಗಾದಿಗಳ ಮೂಲಕ ಆರಂಭಿಸಿದರು. ಪ್ರಕೃತಿಯ ಎಲ್ಲ ಸಂಗತಿಗಳಿಗೂ, ನೀರು, ಬೆಂಕಿ, ದಿಕ್ಕುಗಳು, ಜನನ, ಮರಣ ಮುಂತಾದವುಗಳಿಗೆ ನಿರ್ದಿಷ್ಟ ದೇವರುಗಳನ್ನು ಕಂಡುಕೊಂಡರು. ಈ ಎಲ್ಲ ದೇವರುಗಳ ಆರಾಧನೆಯ ಮಾರ್ಗವೇ ಯಜ್ಞಯಾಗಾದಿಗಳಾಗಿತ್ತು. ಪರಿಸರದ ಪಶು, ಪಕ್ಷಿ, ಪ್ರಾಣಿಗಳು ದೇವರುಗಳಾದರು. ಯಜ್ಞದ ಮೂಲಕ ಆರಾಧಿಸುವ ಪ್ರಕೃತಿಯೊಡನೆ ತಾದಾತ್ಮ್ಯಭಾವದ ಪ್ರದರ್ಶನ. ಯಜ್ಞಕ್ಕೆ ಕುಂಡಗಳ ಅಗತ್ಯ ಉಂಟಾದಾಗ ವಿವಿಧ ಆಕಾರದ ಕುಂಡಗಳ ನಿರ್ಮಿತಿಯು ಮುಂದೆ ಜಾಮಿತಿ (ರೇಖಾಗಣಿತ) ಶಾಸ್ತ್ರವಾಗಿ ಹುಟ್ಟು ಪಡೆದುಕೊಂಡಿತು. ರೇಖೆಗಳು, ರೇಖಾಚಿತ್ರಗಳ ರಚನೆಯ ಆವಿಷ್ಕಾರ, ಮುಂದೆ ತ್ರಿಕೋನ, ಚತುರ್ಬಾಹು, ಪಂಚಬಾಹು, ರೇಖಾಕೃತಿ, ಹಾಗೆಯೇ ಷಟ್ಕೋನ... ನವಕೋನ, ದಶಕೋನ, ಅವುಗಳ ನಿರ್ಮಾಣ, ರಚನಾಕ್ರಮ, ನಿರ್ದಿಷ್ಟ ಅಳತೆ ಹೀಗೆ ರೇಖಾಗಣಿತ ಬಿಚ್ಚಿಕೊಂಡಿತು. ಯಜುರ್ವೇದದ ಶುಲ್ವಸೂತ್ರಗಳು ಈ ಸಂಗತಿಯನ್ನು ವಿವರಿಸುತ್ತವೆ. ಬೋಧಾಯನ, ಆಪಸ್ತಂಬ, ಕಾತ್ಯಾಯನ, ಮಾನವ ಮುಂತಾದವರಿಂದ ಹಿಡಿದು ಆರ್ಯಭಟ, ವರಾಹಮಿಹಿರ, ಭಾಸ್ಕರ, ಶ್ರೀಧರಾಚಾರ್ಯ, ಮಹಾವೀರಾಚಾರ್ಯ, ವಟೇಶ್ವರ, ಮಂಜುಲಾಚಾರ್ಯ ಮುಂತಾದವರವರೆಗೆ, ಅಷ್ಟೇಕೆ ಇನ್ನೂ ಮುಂದೆ 17ನೇ ಶತಮಾನದವರೆಗೂ ಈ ಗಣಿತ ಪರಂಪರೆ ಬೆಳೆದುಬಂದಿತು. ಅವರುಗಳು ರಚಿಸಿದ ಗ್ರಂಥಗಳೂ ಅಪಾರ. ಸಂಹಿತೆಗಳು, ಕಲ್ಪಸೂತ್ರ, ವೇದಾಂಗಗಳು, ಆರ್ಯಭಟೀಯಂ, ಬೃಹತ್ ಸಂಹಿತಾ, ಬ್ರಹ್ಮಸ್ಫುಟ ಸಿದ್ಧಾಂತ, ಖಂಡಖಾದ್ಯಕ, ಪಾಟೀಗಣಿತ, ಗಣಿತ ಸಾರಸಂಗ್ರಹ, ವಟೇಶ್ವರ ಸಿದ್ಧಾಂತ, ಸಿದ್ಧಾಂತ ಶಿರೋಮಣಿ, ಲೀಲಾವತಿ ಗಣಿತ, ದೃಗ್ಗಣಿತಂ, ಸೂರ್ಯಸಿದ್ಧಾಂತ, ಪಂಚಸಿದ್ಧಾಂತಿಕ, ಬೀಜಗಣಿತಂ, ಭಟದೀಪಿಕಾ, ಕರಣಕುತೂಹಲಂ, ವೇಣ್ವಾರೋಹಂ ಇನ್ನೂ ಹಲವಾರು ಗಣಿತದ ಗ್ರಂಥಗಳಿವೆ. ಅಲ್ಲದೇ ಈ ಗ್ರಂಥಗಳಲ್ಲಿ ಆಧುನಿಕ ಗಣಿತವೂ ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳುವಂತಹ ಸಾಕಷ್ಟು ಗಣಿತಸೂತ್ರಗಳು, ಸಿದ್ಧಾಂತಗಳನ್ನು ಪ್ರಾಚೀನರು ಸಂಶೋಧಿಸಿದರು.

ಅಂಕಗಣಿತದ 1ರಿಂದ 9 ಮತ್ತು 0 (ಸೊನ್ನೆ) ಆವಿಷ್ಕಾರ ಗಣಿತ ಲೋಕಕ್ಕೆ ಮಹಾದ್ವಾರ ತೆರೆಯಿತು. ಇವುಗಳನ್ನು ಸಂಖ್ಯೆಗಳು (ಅಂಕೆಗಳು) ಎಂದು ಕರೆದರು. ಈ ಸಂಖ್ಯೆಗಳ ಮುಖಬೆಲೆ (ಉದಾ 1; ಒಂದು ಮಾತ್ರ) ಸ್ಥಾನಬೆಲೆ (ಉದಾ 100; ಇಲ್ಲಿ 1 ಸಂಖ್ಯೆಯು ನೂರನ್ನು ಪ್ರತಿನಿಧಿಸುತ್ತದೆ) ದಶಮಾನ ಪದ್ಧತಿ; ಒಂದರಿಂದ ಪ್ರಾರಂಭಿಸಿ ಪ್ರತಿ ಸ್ಥಾನದಲ್ಲೂ ಹತ್ತುಪಟ್ಟು ಹೆಚ್ಚಿಸುವುದನ್ನು ವಿವರಿಸುವ ವಿಷ್ಣು ಪುರಾಣದ ಮೂರನೇ ಸಂಪುಟದ ಮೂರನೇ ಅಧ್ಯಾಯದ ನಾಲ್ಕನೇ ಶ್ಲೋಕ ಹೀಗಿದೆ.

**ಸ್ಥಾನಾತ್ ಸ್ಥಾನಂ ದಶಗುಣಮೇಕಸ್ಮಾದ್ಗಣ್ಯತೇ ದ್ವಿಜ ।**
**ತತೋಷ್ಟಾದಶಮೇ ಭಾಗೇ ಪರಾರ್ಧಮಭಿಧೀಯತೇ ॥**

ಅರ್ಥ: ಸಂಖ್ಯೆಯನ್ನು ಬಲದಿಂದ ಎಡಕ್ಕೆ ಲೆಕ್ಕ ಮಾಡುವಾಗ ಆ ಸಂಖ್ಯೆಯ ಸ್ಥಾನದ ಅಳತೆಯು ಕ್ರಮವಾಗಿ ಒಂದಕ್ಕಿಂತ ಒಂದು ಹತ್ತರಷ್ಟು ಹೆಚ್ಚುತ್ತಾ ಹೋಗುವುದು. ಈ ಕ್ರಮದಲ್ಲಿ ಹದಿನೆಂಟನೇ ಸ್ಥಾನವು 'ಪರಾರ್ಧ'ವೆನಿಸುವುದು.

ಅಂದರೆ ಆಧುನಿಕ ಗಣಿತದ ಪ್ರಕಾರ ಪರಾರ್ಧವೆಂದರೆ 1018 ವಿಷ್ಣುಪುರಾಣದ ಇದೇ ಭಾಗದ ಶ್ಲೋಕಗಳಲ್ಲಿ ಏಕದಶದಿಂದ ಹಿಡಿದು ಕೋಟಿ, ಅರ್ಬುದ (107) ಅಬ್ಜ (108), ಖರ್ವ (109) ಹೀಗೆ ನಿಖರ್ವ, ಮಹಾಪದ್ಮ, ಶಂಕು, ಸಮುದ್ರ, ಮಧ್ಯ, ಅಂತ, ತಿತಿಲಂಬ (1027), ಸರ್ವಬಾಲ ಹೇಳಲ್ಪಡುತ್ತದೆ. ಯಾವಾಗ ಸೂರ್ಯನು ಕಾಣಿಸುವುದಿಲ್ಲವೋ ಆಗ ಸೂರ್ಯಾಸ್ತಮಯವೆಂದು ಹೇಳಲ್ಪಡುತ್ತದೆ. ಸರ್ವದಾ ಪ್ರಕಾಶಿಸುತ್ತಿರುವ ಸೂರ್ಯನಿಗೆ ಅಸ್ತಮಾನವೂ ಇಲ್ಲ, ಉದಯವೂ ಇಲ್ಲ. (ವಿಷ್ಣುಪುರಾಣ ಸಂಪುಟ 1, ಅಧ್ಯಾಯ 8, ಶ್ಲೋಕ 15, 16)

ಆಧುನಿಕ ವಿಜ್ಞಾನದ ವಿವರಣೆ ಇದೇ ಅಲ್ಲವೇ? ಧ್ರುವ ಪ್ರದೇಶಗಳಲ್ಲಿ ಹಗಲು ರಾತ್ರಿ ವ್ಯತ್ಯಾಸವಿರುತ್ತದೆ. ಆರು ತಿಂಗಳು ಹಗಲು ಮತ್ತು ಆರು ತಿಂಗಳು ರಾತ್ರಿಯೂ ಅಲ್ಲಿರುತ್ತೆ ಎಂದು ಆರ್ಯಭಟನು ತಿಳಿಸಿದ್ದಾನೆ. ಗ್ರಹಣಗಳ ಸಂಭವಿಸುವಿಕೆಗೆ ಕಾರಣಗಳನ್ನು ಹೇಳುವ ಆರ್ಯಭಟನ ಶ್ಲೋಕ ಹೀಗಿದೆ.

**ಛಾದಯತಿ ಶಶಿಸೂರ್ಯಂ ಶಶಿನಂ ।**
**ಮಹತೀತ ಭೂಚ್ಛಾಯಾ ॥ (ಗೋಲ 37)**

ಪುಟ 9 ಕ್ಕೆ ➢



# ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ

■ ನಂ. ನಾಗಲಕ್ಷ್ಮಿ
ಉಪನ್ಯಾಸಕಿ

ಮತ್ತೊಮ್ಮೆ ಕನ್ನಡ ರಾಜ್ಯೋತ್ಸವದ, ಮಕ್ಕಳ ದಿನಾಚರಣೆಯ ಸಂಭ್ರಮ ಈ ನವೆಂಬರ್ ತಿಂಗಳಲ್ಲಿ ಎದುರಾಗುತ್ತಿದೆ. ಯಥಾಪ್ರಕಾರ ರಾಜ್ಯೋತ್ಸವಕ್ಕಾಗಂತೂ ಸಕಲ ಸಿದ್ಧತೆಗಳೂ ಕೆಲವು ತಿಂಗಳ ಮೊದಲಿನಿಂದಲೇ ಆರಂಭವಾಗಿಬಿಟ್ಟಿವೆ. ಪ್ರಶಸ್ತಿಗಳ ಪಟ್ಟಿ ತಯಾರಿಕೆ, ಅಂಗಡಿ, ಕಛೇರಿಗಳ ಮುಂದೆ ಕನ್ನಡದ ಫಲಕಗಳ ಅಲಂಕಾರ, ಆರ್ಕೆಸ್ಟ್ರಾದ ಅಬ್ಬರದ ಕಾರ್ಯಕ್ರಮಕ್ಕೆ ತಯಾರಿ– ಇತ್ಯಾದಿ. ಆದರೆ ಹಿಂದಣ 'ಹೆಜ್ಜೆಯನರಿತಲ್ಲದೆ ಮುಂದಿನ ಹೆಜ್ಜೆಯನಿಡಲಾಗದು' ಎಂದಿದ್ದಾನೆ, ಒಬ್ಬ ಮಹಾಕವಿ. ನಾವೀಗ ಆ ಕೆಲಸವನ್ನು ಮಾಡಬೇಕಿದೆ.

ಇದು ಇಡೀ ಕರ್ನಾಟಕದ ಹಬ್ಬ, ರಾಜ್ಯ ಭಾಷೆ ಕನ್ನಡಮ್ಮನ ಹಬ್ಬ, ನಾಡದೇವಿ ಭುವನೇಶ್ವರಿಯ ಹಬ್ಬ. ಹರಿದು ಹಂಚಿಹೋಗಿದ್ದ ಕರ್ನಾಟಕ ಏಕೀಕರಣವಾದ ಶುಭಸಂಗತಿಯನ್ನು ಸ್ಮರಿಸುತ್ತ ಪ್ರತಿವರ್ಷ ನವೆಂಬರ್ ಒಂದರಂದು ಸಡಗರ ಪಡುತ್ತೇವೆ ನಿಜ. ನಾಡಿನ ಸುತ್ತಮುತ್ತ ಈ ಸಾಧನೆಗಾಗಿ ಹಲವು ರೀತಿಯಲ್ಲಿ ಬಲಿದಾನ ಮಾಡಿದವರಿಗೆ ಲೆಕ್ಕವಿಲ್ಲ. ಹೀಗೆ, ನಾಡು–ನುಡಿಯ ಸೇವೆಗೆ ಕಂಕಣಬದ್ಧರಾಗಿ ಶ್ರಮಿಸಿದವರನ್ನು ಕೃತಜ್ಞತೆಯಿಂದ ಸ್ಮರಿಸುವುದು ಆ ಶ್ರಮವನ್ನು ಆದರ್ಶವಾಗಿಟ್ಟು, ನಮ್ಮ ಪಾಲಿನ ಕಾರ್ಯವನ್ನು ಮುಂದುವರಿಸುವುದು ಇದೀಗ ನಮ್ಮ ಹೊಣೆಯಾಗಿದೆ. ಹೀಗೆ ಸೇವೆ ಸಲ್ಲಿಸಿದವರನ್ನು ಸ್ಮರಿಸುವಾಗ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಸೇವೆ ಅನನ್ಯವಾದದ್ದೆಂಬುದನ್ನು ನಾವು ತಿಳಿದಿರಬೇಕು.

ಕ್ರಿ.ಶ. 18ನೆಯ ಶತಮಾನದಲ್ಲಿ ನಮ್ಮ ಕರ್ನಾಟಕ ದೇಶ ಬೇರೆ ಬೇರೆ ಕಾಲಗಳಲ್ಲಿ ತುಂಡುತುಂಡುಗಳಾಗಿ, ಬ್ರಿಟಿಷರ ಆಡಳಿತದ ಕೆಳಗೆ ಬಂದಿತು. ಆಗ ಅವರು ಅದರ ಒಂದು ಭಾಗವನ್ನು ತಮ್ಮ ನೇರ ಆಡಳಿತದಲ್ಲಿಟ್ಟುಕೊಂಡು, ಉಳಿದವನ್ನು ಬೇರೆ ಬೇರೆ ದೇಶೀಯ ರಾಜರ ವಶದಲ್ಲಿರಲು ಬಿಟ್ಟು, ಮೇಲ್ವಿಚಾರವನ್ನು ಮಾತ್ರ ತಾವು ಇಟ್ಟುಕೊಂಡರು. ಹಾಗಾಗಿ ಕನ್ನಡದ ಜನರು ಮುಂಬಯಿ, ಚೆನ್ನೈ, ಹೈದರಾಬಾದು, ಕಾಸರಗೋಡು ಪ್ರದೇಶಗಳಲ್ಲಿ ಉಳಿದುಹೋಗುವಂತಾಯಿತು. ನಾಡು ಒಮ್ಮುಖವಾಗಿ, ಒಂದು ಕುಲವಾಗಿ ಉಳಿದು ಸಮಸ್ತ ಕನ್ನಡಿಗರು ಇರುವ ಪ್ರದೇಶಗಳೆಲ್ಲ ಒಂದಾಗಿ 'ಏಕೀಕರಣವಾಗಬೇಕೆಂಬ ಹೋರಾಟ ಪ್ರಾರಂಭವಾಗಿ, ಅದರಲ್ಲಿ ನಾಡಿನಾದ್ಯಂತ ಕನ್ನಡಿಗರು ಪಾಲ್ಗೊಂಡು ಸಫಲರಾಗಲು ಸಾಧ್ಯವಾಯಿತು. ಆ ಸಾಫಲ್ಯದ ಫಲವೇ ರಾಜ್ಯೋತ್ಸವದ ಸಂಭ್ರಮ.

ಕ್ರಿ.ಶ 1890 ರಲ್ಲಿ ಎಂದರೆ ಇಂದಿಗೆ ಸುಮಾರು 126 ವರ್ಷಗಳ ಹಿಂದೆ ಉತ್ತರಕರ್ನಾಟಕದ ಕೇಂದ್ರ ಸ್ಥಾನವಾದ ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ವೆಂಬ ಒಂದು ಸಂಸ್ಥೆಯನ್ನು ಹೊರಡಿಸಿ, ಕನ್ನಡದ ಬಾವುಟವನ್ನು ನೆಟ್ಟು ಹಾರಿಸಿದರು. ಅದು ಕನ್ನಡಿಗರು ಸುಸಂಘಟಿತರಾಗಿ ಕರ್ನಾಟಕ ಏಕೀಕರಣಕ್ಕಾಗಿ ಇಟ್ಟ ಮೊದಲನೇ ಹೆಜ್ಜೆಯಾಗಿತ್ತು. ಹೀಗೆ ಪ್ರಾರಂಭವಾದ ಕರ್ನಾಟಕ ಸಂಘದ ಸ್ಥಾಪನೆ, ಬೆಳವಣಿಗೆಗಾಗಿ ಶ್ರಮಿಸಿದ ಆ ಭಾಗದ ಹಲವು ಹಿರಿಯರ ಸೇವೆಯನ್ನು ಕನ್ನಡಿಗರು ಎಂದಿಗೂ ಮರೆಯುವಂತಿಲ್ಲ. ಕಾಲಕ್ರಮೇಣ ಸಂಘವು ಬೆಳೆಯುತ್ತಾ ತನ್ನ ಕನ್ನಡಪರ ಚಟುವಟಿಕೆಗಳನ್ನು ಹತ್ತಾರು ರೀತಿಗಳಲ್ಲಿ ವಿಸ್ತರಿಸಿಕೊಳ್ಳುತ್ತ ಇಂದು ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿರುವ ಭಾಷಾಸೇವೆಯ ಕಾರ್ಯಗಳನ್ನೆಲ್ಲ ನಡೆಸತೊಡಗಿತು. ನಂತರದಲ್ಲಿ ಇದೇ ರೀತಿಯ ಕರ್ನಾಟಕ ಸಂಘ ರಾಜ್ಯದ ಇತರ ನಗರದಲ್ಲಿ ಕೂಡ ತಲೆಯೆತ್ತಿ ಅಲ್ಲಿಯೂ ಕನ್ನಡ ಭಾಷಾ ಸೇವೆ ನಡೆಯಲಾರಂಭವಾಯಿತು. ಎಲ್ಲ ಚಟುವಟಿಕೆಗಳ ಫಲವಾಗಿ 1956 ರಲ್ಲಿ ಕರ್ನಾಟಕ ಏಕೀಕರಣದ ಅಧಿಕೃತ ನಿರ್ಣಯವಾಗಿ ಪ್ರತಿ ವರ್ಷ ನವೆಂಬರ್ ಒಂದರಂದು ಈ ಸಂಭ್ರಮವನ್ನು ಆಚರಿಸುವುದು ಪ್ರಾರಂಭವಾಯಿತು. ಇದಕ್ಕಾಗಿ ಕರ್ನಾಟಕ ಸಂಘವಲ್ಲದೆ ಇತರ ಹಲವು ಸಂಘ, ಸಂಸ್ಥೆಗಳು, ವ್ಯಕ್ತಿಗಳು, ಜನಸಾಮಾನ್ಯರು ಎಲ್ಲರ ಹೋರಾಟ ಜೊತೆಗೂಡಿತ್ತೆಂಬುದು ಮುಖ್ಯವಾದ ವಿಷಯ.

ಇದೆಲ್ಲ ನಡೆದು ಈಗ 60 ವರ್ಷಗಳೇ ಕಳೆದುಹೋಗಿದೆ. ಇಂತಹ ಒಂದು ಮಹತ್ಕಾರ್ಯದ ಉದ್ದೇಶ ಕನ್ನಡ, ನಾಡುನುಡಿ ತನ್ನ ಹಿರಿಯಮೆಯನ್ನು ವೈಶಿಷ್ಟವನ್ನು, ಪರಂಪರೆಯ ಶ್ರೀಮಂತಿಕೆಯನ್ನು ಉಳಿಸಿ, ಬೆಳೆಸುವುದೇ ಆಗಿತ್ತು. ಆದರೆ, ಇಂದು ನಮ್ಮ ಕನ್ನಡಿಗರಿಗೆ ನಾಡು– ನುಡಿಯ ಬಗೆಗಿನ ಅಭಿಮಾನ, ಗೌರವ, ಕಾಳಜಿ ಯಾವ ಹಂತದಲ್ಲಿದೆಯೆಂದು ಆಲೋಚಿಸಿದಾಗ ನಿರಾಸೆಯೇ ಉಂಟಾಗುತ್ತದೆ. ಸಾಹಿತಿಗಳು ಸಾಹಿತ್ಯಾಸಕ್ತರು ಬಿಡಿ, ಸಾಮಾನ್ಯಜನರಲ್ಲಿ ಭಾಷೆ ಜೀವಂತವಾಗಿ,

ಪುಟ 10 ಕ್ಕೆ ➤

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ – 1




ಭೀಮಸೇನ್ ಪುರೋಹಿತ್
B.E. MTech
ಇಂಜಿನಿಯರ್
ಬೆಂಗಳೂರು



ಶಿಕ್ಷಣ ಎನ್ನುವುದು ಯಾವುದೇ ಸಮಾಜದ ಅಥವಾ ದೇಶದ ನಿರ್ಮಾಣಕ್ಕೆ ಭದ್ರ ಬುನಾದಿಯಾಗಬಲ್ಲ ವಿಷಯ. ಎಲ್ಲಿ ಶಿಕ್ಷಣ ಉನ್ನತ ಮಟ್ಟದಲ್ಲಿರುವುದೋ ಅಲ್ಲಿ ಜನತೆಯೂ ಸುಭಿಕ್ಷೆಯಿಂದ ಬಾಳುತ್ತಿರುತ್ತಾರೆ. ಗ್ರೀಕ್ ನ ತತ್ವಜ್ಞಾನಿ ಅರಿಸ್ಟಾಟಲ್ ಭಾರತವನ್ನು "ಬೆಳಕಿನ ದೇಶ" ಎಂದು ಕರೆದಿದ್ದ. ಅದಕ್ಕೆ ಕಾರಣವೂ ಪ್ರಾಚೀನ ಭಾರತದಲ್ಲಿದ್ದ ಶ್ರೇಷ್ಠ ಶಿಕ್ಷಣ. ನಳಂದಾ, ತಕ್ಷಶಿಲಾ ದಂತಹ ಶಿಕ್ಷಣ ಸಂಸ್ಥೆಗಳು ರಾಷ್ಟ್ರದ ಉತ್ಥಾನಕ್ಕಾಗಿ ಆ ಮಟ್ಟಿಗೆ ಕೊಡುಗೆ ಕೊಟ್ಟಿದ್ದವು.

ಪರಕೀಯರ ಆಕ್ರಮಣದ ಪ್ರಭಾವವಾಗಿ, ಪ್ರಾಚೀನ ಶಿಕ್ಷಣ ಪದ್ಧತಿಗಳು, ಸಂಸ್ಕಾರಗಳು ನಶಿಸಿ, ಯಾಂತ್ರಿಕವಾದ ಶೈಕ್ಷಣಿಕ ಪದ್ಧತಿಗಳು ಪ್ರವರ್ಧಿಸಿದ ಮೇಲೆ, ಶಿಕ್ಷಣದೊಂದಿಗೆ ಬೆಳೆಯಬೇಕಾಗಿದ್ದ ರಾಷ್ಟ್ರೀಯತೆಯೂ ಕ್ಷೀಣಿಸಿತು. ಆದಾಗ್ಯೂ, ದೇಶದ ಉತ್ಥಾನದಲ್ಲಿ ಶಿಕ್ಷಣದ ಮಹತ್ವವನ್ನು ತಿಳಿದ ನಾಯಕರು ಆಗಾಗ ಶಿಕ್ಷಣವನ್ನು ಮೇಲೆತ್ತುವ ಕಾರ್ಯವನ್ನು ಮಾಡಿದ್ದಾರೆ. ಈ ದೃಷ್ಟಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಅನೇಕ ಮಹಾತ್ಮರು ಯುವಕರಿಗೆ ಮೌಲ್ಯಯುಕ್ತ ಶಿಕ್ಷಣವನ್ನು ಕೊಡಿಸುವ ಸಂಕಲ್ಪವನ್ನು ಮಾಡಿ, ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ಸು ಕಂಡರು. ಶಿಕ್ಷಣದ ಮೂಲಕವೂ ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ ನೀಡಿದರು. ಅಂತಹ ಹಲವು ಸಂಸ್ಥೆಗಳ ಸ್ಥೂಲ ಪರಿಚಯ ಮಾಡಿಕೊಡುವುದು ಈ ಲೇಖನಸರಣಿಯ ಉದ್ದೇಶ.

1857 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ, ದೇಶದ ಎಲ್ಲ ನಾಯಕರಿಗೂ, ಶಿಕ್ಷಣ ಪದ್ಧತಿಯನ್ನು ಬೆಳೆಸಿ, ಪ್ರಜಾಸತ್ತಾತ್ಮಕ ರೀತಿಯಿಂದ ಬ್ರಿಟಿಷರ ವಿರುದ್ಧ ಹೋರಾಡುವುದೇ ಮಾರ್ಗ ಎಂಬುದು ಮನವರಿಕೆಯಾಗಿತ್ತು. ಈ ಘಟ್ಟದಲ್ಲಿ ರಾಷ್ಟ್ರೀಯ ಚಿಂತಕರಾದ ಬಾಲ ಗಂಗಾಧರ ತಿಲಕ್, ವಿಷ್ಣುಶಾಸ್ತ್ರಿ ಚಿಪಳೂಣ್ಕರ್, ಗೋಪಾಲ್ ಗಣೇಶ ಅಗರ್ಕರ್ ಮುಂತಾದವರು ಸೇರಿ ಪುಣೆಯಲ್ಲಿ ಒಂದು ಸಣ್ಣ ಇಂಗ್ಲಿಷ್ ಶಾಲೆಯನ್ನು ತೆರೆದರು. ಅದು ಯಶಸ್ಸನ್ನು ಕಂಡು ಮುಂದೆ "ಡೆಕ್ಕನ್ ಎಜುಕೇಷನಲ್ ಸೊಸೈಟಿ" ಎಂಬ ಸಂಸ್ಥೆಯನ್ನು 1884 ರಲ್ಲಿ ತೆರೆದರು. ಇದೆ ಸಂಸ್ಥೆಯ ಆಶ್ರಯದಲ್ಲಿ "ಫರ್ಗ್ಯೂಸನ್ ಕಾಲೇಜ್"ನ್ನು ತೆರೆದರು.

ಈ ಕಾಲೇಜು ಸುಮಾರು 37 ಎಕರೆ ಪ್ರದೇಶದಲ್ಲಿ ತನ್ನ ಕಟ್ಟಡವನ್ನು ಹೊಂದಿದೆ. ಈ ಜಾಗವನ್ನು 99 ವರ್ಷಗಳ ಲೀಸ್‌ಗೆ ಡೆಕ್ಕನ್ ಎಜುಕೇಶನ್ ಸೊಸೈಟಿ ಖರೀದಿಸಿತ್ತು. 1892 ರಲ್ಲಿ ಪ್ರಾರಂಭವಾದ ಕಟ್ಟಡ ಕಾಮಗಾರಿ, 1895 ರಲ್ಲಿ ಪೂರ್ಣಗೊಂಡು, ಆ ವರ್ಷದಿಂದಲೇ ಕಾರ್ಯೋನ್ಮುಖವಾಯಿತು. ತನ್ಮೂಲಕ ರಾಷ್ಟ್ರನಿರ್ಮಾಣದ ಭವ್ಯ ಕ್ರಿಯೆಯಲ್ಲಿ ಬೆಳೆಯಿತು.

ಈ ಕಾಲೇಜಿನ ಉದ್ಘಾಟನೆಗೆ, ವಿಲಿಯಂ ವರ್ಡ್ಸ್‌ವರ್ತ್ ರವರು ಸಾಕ್ಷಿಯಾಗಿದ್ದರು. ತಿಲಕರ ಜೊತೆಗೆ, ಮಹಾದೇವ ಗೋವಿಂದ ರಾನಡೆ, ಆರ್.ಜಿ.ಭಂಡಾರ್ಕರ್ ಅವರೂ ಈ ಕಾಲೇಜಿನ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸಿದರು. ಆಗಿನ ಬಾಂಬೆ ಪ್ರಾಂತದ ಗವರ್ನರ್ ಆಗಿದ್ದ ಸರ್ ಜೇಮ್ಸ್ ಫರ್ಗ್ಯೂಸನ್ ಅವರ ಹೆಸರೇ ಇಡಲಾಗಿದೆ. ಅವರೇ ಈ ಕಾಲೇಜಿಗೆ ಬೇಕಾದ ಪರವಾನಗಿಗಳನ್ನು ಕೊಟ್ಟಿದ್ದರು. ಅಲ್ಲದೆ, ಕಾಲೇಜಿನ ಶಿಕ್ಷಣದ ರೂಪುರೇಷೆಗಳಿಗೆ ಆಡಳಿತದವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು.

ಸ್ವಾತಂತ್ರ್ಯಾನಂತರವೂ, ಈ ಕಾಲೇಜಿನಿಂದ ಅನೇಕ ರಾಷ್ಟ್ರ ನಾಯಕರು ಹೊರಬಂದಿದ್ದಾರೆ. ಮಹಾತ್ಮಾ ಗಾಂಧೀಜಿ, ಸ್ವಾತಂತ್ರ್ಯ ವೀರ ಸಾವರ್ಕರ್ ಮುಂತಾದ ಪ್ರಭಾವೀ ನಾಯಕರೂ ಕೂಡ ಫರ್ಗ್ಯೂಸನ್ ಕಾಲೇಜಿನ ಬಗ್ಗೆ ಅತ್ಯಂತ ಆದರದ ಭಾವವನ್ನು ವ್ಯಕ್ತಪಡಿಸಿದ್ದಾರೆ. ನೊಬೆಲ್ ಪಾರಿತೋಷಕವನ್ನು ಪಡೆದ ಸರ್ ಸಿ.ವಿ ರಾಮನ್ ಅವರು, ಈ ಕಾಲೇಜಿನ ಸಮಾರಂಭಕ್ಕೆ ಬಂದಾಗ ಹೀಗೆ ಹೇಳಿದ್ದರು. "ಪುಣೆಯ ಸ್ವಾವಲಂಬಿತನದ, ಸ್ವ–ಉತ್ಥಾನದ ಇತಿಹಾಸವು, ಇದೇ ಕಾಲೇಜಿನ ಪ್ರಾಂಗಣದಲ್ಲಿ ರೂಪಿತವಾಗಿದೆ."

ಈ ಕಾಲೇಜಿನಲ್ಲಿ ಸ್ವತಃ ಬಾಲಗಂಗಾಧರ ತಿಲಕ್, ಗೋಪಾಲ ಕೃಷ್ಣ ಗೋಖಲೆಯಂಥ ದೇಶಾಭಿಮಾನಿಗಳು ಶಿಕ್ಷಕರಾಗಿದ್ದರು. ಪಾಠ, ಪ್ರವಚನಗಳ ಜೊತೆಗೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಕ್ತಿಯನ್ನು ಮೂಡಿಸುವ ಪ್ರಯತ್ನ ನಡೆಯುತ್ತಿತ್ತು. ಇದರ ಪರಿಣಾಮ ಯುವಕರ ಮೇಲಾಗಿ ಅವರು ಬ್ರಿಟೀಷರ ವಿರುದ್ಧ ಹೋರಾಡುವ ಪಣ ತೊಟ್ಟರು. ಅನೇಕ ಕ್ರಾಂತಿಕಾರಿಗಳ ಜನ್ಮಕ್ಕೆ ಫರ್ಗ್ಯೂಸನ್ ಕಾಲೇಜು ನಾಂದಿ ಹಾಡಿತು.

●

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು –01

**ವಿಷಯ: ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಹಾಗೂ ತತ್ಸಮಾನ ಹುದ್ದೆಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿರುವ ಬಗ್ಗೆ.**

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 78 ಎಸ್‌ಎಲ್‌ಬಿ 2016 ದಿ:15.04.2016. 2. ಉಪನಿರ್ದೇಶಕರು (ಆಡಳಿತ) ಸಾಶಿಇ, ಚಿಕ್ಕಬಳ್ಳಾಪುರ ಜಿಲ್ಲೆರವರ ಪತ್ರ ದಿ:16.07.2016. 3) ಈ ಕಛೇರಿಯ ಪತ್ರ ದಿನಾಂಕ : 01.09.2016. 4) ಮಾಧ್ಯಮ ಸಂಚಾಲಕರು, ಮೈಸೂರು ಜಿಲ್ಲಾ ನಗರ ಕಾಂಗ್ರೆಸ್ ಸಮಿತಿ, ಮೈಸೂರು ಇವರ ಪತ್ರ ದಿನಾಂಕ: 15.09.2016. 5) ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಬೆಂಗಳೂರುರವರ ಪತ್ರ ಸಂಖ್ಯೆ 258/2016–17 ದಿನಾಂಕ 17.09.2016. 6) ಶ್ರೀ ಪುಟ್ಟಣ್ಣ, ಎಂ.ಎ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು ಶಿಕ್ಷಕರ ಕ್ಷೇತ್ರ ಇವರ ಪತ್ರ ದಿನಾಂಕ: 19.09.2016. 7) ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ದಿ: 20.09.2016.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿತ (1)ರ ಸರ್ಕಾರಿ ಆದೇಶದಲ್ಲಿ ಜೂನ್ 2016ರಂದು ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ ಅನುದಾನಿತ ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ. ಉಲ್ಲೇಖಿತ (2)(3)(4)(5)(6)(7)ರ ಪತ್ರಗಳಲ್ಲಿ ಶಿಕ್ಷಕರ ಸಂಘ ಹಾಗೂ ವಿಧಾನಸಭಾ ಸದಸ್ಯರುಗಳು ಮತ್ತು ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಹಾಗೂ ಗಣ್ಯ ವ್ಯಕ್ತಿಗಳು, ಉಪನಿರ್ದೇಶಕರುಗಳು, ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ದಿನಾಂಕ: 01.06.2016 ರಿಂದ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಸಂದರ್ಭದಲ್ಲಿ ಪ್ರೌಢಶಾಲಾ ಸಹಶಿಕ್ಷಕರು ವೃಂದದಲ್ಲಿನ ಇತರೆ ಅಂದರೆ 1. ದೈಹಿಕ ಶಿಕ್ಷಕರು ಗ್ರೇಡ್–1 ಮತ್ತು ಗ್ರೇಡ್–2, 2. ಸಂಗೀತ ಶಿಕ್ಷಕರು, 3. ವೃತ್ತಿ ಶಿಕ್ಷಕರು, 4. ಚಿತ್ರಕಲಾ ಶಿಕ್ಷಕರು, 5. ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್–2 ತತ್ಸಮಾನ ಬೋಧಕೇತರ ಹುದ್ದೆಗಳಲ್ಲಿ ಅಂದರೆ ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಪದವೀಧರ ಮುಖ್ಯ ಶಿಕ್ಷಕರು, ತಾಂತ್ರಿಕ ಸಹಾಯಕರು 6. ಪ್ರಾಥಮಿಕ ಶಾಲೆಯಲ್ಲಿನ ಟಿ.ಜಿ.ಟಿ ಶಿಕ್ಷಕರು 7. ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ತತ್ಸಮಾನ ವೃಂದದಲ್ಲಿ ವಿಷಯ ಪರಿವೀಕ್ಷಕರು, ಬಿ.ಆರ್.ಸಿ ಡಯಟ್ ಕಿರಿಯ ಉಪನ್ಯಾಸಕರು ಹಾಗೂ ಸಹಾಯಕ ನಿರ್ದೇಶಕರುಗಳು ಮತ್ತು ಇತರೆ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಈ ಸೌಲಭ್ಯವನ್ನು ನೀಡುವ ಬಗ್ಗೆ ಸ್ಪಷ್ಟನೆ ಇರುವುದಿಲ್ಲ.

ಸ್ಥಗಿತ ವೇತನ ಬಡ್ತಿ ಪಡೆಯುತ್ತಿರುವ ಶಿಕ್ಷಕರುಗಳಿಗೆ ಈ ಬಡ್ತಿಯನ್ನು ಮಂಜೂರು ಮಾಡಿದ್ದಲ್ಲಿ ಸ್ಥಗಿತ ವೇತನ ಬಡ್ತಿಗೆ ಪರಿಗಣಿಸುವ ಕುರಿತು ಮತ್ತು ಸೇವಾ ಅವಧಿಯಲ್ಲಿ ಶಿಕ್ಷಕರುಗಳು ಬಡ್ತಿಯನ್ನು ನಿರಾಕರಿಸಿರುವ ಶಿಕ್ಷಕರುಗಳು ಈ ಸೌಲಭ್ಯಕ್ಕೆ ಪರಿಗಣಿಸುವ ಕುರಿತು ಸ್ಪಷ್ಟನೆ ಇರುವುದಿಲ್ಲ. ಉಲ್ಲೇಖಿತ (1)ರ ಸರ್ಕಾರಿ ಆದೇಶದಲ್ಲಿ ಈ ಮೇಲಿನ ಶಿಕ್ಷಕರ ವೃಂದದವರಿಗೆ ವೇತನ ಬಡ್ತಿ ನೀಡುವ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ಇಲ್ಲದೆ ಇರುವುದರಿಂದ ಉಲ್ಲೇಖ (3) ರಂತೆ ಈ ಕಛೇರಿಯಿಂದ ಸರ್ಕಾರದ ಮಾರ್ಗದರ್ಶನ ಕೋರಲಾಗಿತ್ತು. ಆದರೆ ಸರ್ಕಾರದಿಂದ ಇದುವರೆವಿಗೂ ಯಾವುದೇ ಆದೇಶ ಸ್ವೀಕೃತವಾಗಿರುವುದಿಲ್ಲ. ಪ್ರಸ್ತುತ ವೇತನ ಬಡ್ತಿ ವಂಚಿತರಾದ ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮೇಲ್ಕಂಡ ಸರ್ಕಾರದ ಆದೇಶದಲ್ಲಿ ಪ್ರೌಢಶಾಲಾ ಸಹ ಶಿಕ್ಷಕರಿಗೆ ನೀಡಿರುವ ಸೌಲಭ್ಯವನ್ನು ಇತರೆ ಶಿಕ್ಷಕರುಗಳಿಗೂ ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ವಿಸ್ತರಿಸುವ ಬಗ್ಗೆ ಕ್ರಮ ವಹಿಸಲು ಕೋರಿರುತ್ತಾರೆ. ಈ ಬಗ್ಗೆ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಸಹ ಪ್ರೌಢಶಾಲಾ ಶಿಕ್ಷಕರ ಇತರೆ ವೃಂದದವರಿಗೂ ಸಹ ಸರ್ಕಾರ ಆದೇಶವನ್ನು ವಿಸ್ತರಿಸುವ ಬಗ್ಗೆ ನಿಯಮಾನುಸಾರ ಸೂಚಿಸಿರುತ್ತಾರೆ. ಪತ್ರ ಅನುಬಂಧಿಸಿದೆ.

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಜೂನ್ 2016 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರ ಇತರೆ ಶಿಕ್ಷಕರುಗಳಿಗೂ ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಮಾಡುವ ಕುರಿತು ಸರ್ಕಾರದ ಮಾರ್ಗದರ್ಶನ ಕೋರಲಾಗಿದೆ.

ಸಹಿ\– ನಿರ್ದೇಶಕರು(ಪ್ರೌಢ ಶಿಕ್ಷಣ)

---

## ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ/ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ

**ಶಿಕ್ಷಕರ ಸದನ, ಕೆ.ಜಿ ರಸ್ತೆ, ಬೆಂಗಳೂರು –02**

ಸಂಖ್ಯೆ./ಎಫ್3/ಶಿ.ಕ.ನಿ/ ಪ್ರ.ವಿ.ವೇ.01/2016–17 ದಿನಾಂಕ: 26.08.2016

## ಶಿಕ್ಷಕರ ಮಕ್ಕಳಿಗೆ ಪ್ರತಿಭಾವಂತ ವಿದ್ಯಾರ್ಥಿ ವೇತನ

**2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಜಿಲ್ಲಾ/ ವಿಶ್ವ ವಿದ್ಯಾಲಯ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಪಡೆದ ಶಿಕ್ಷಕರುಗಳು/ ನಿವೃತ್ತ ಶಿಕ್ಷಕರ ಮಕ್ಕಳಿಗೆ "ಪ್ರತಿಭಾವಂತ ವಿದ್ಯಾರ್ಥಿ ವೇತನ" ವನ್ನು ಮಂಜೂರು ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2015–16ನೇ ಸಾಲಿನ ಮಾರ್ಚ್/ಏಪ್ರಿಲ್ 2016ರಲ್ಲಿ ನಡೆದ ಎಸ್.ಎಸ್.ಎಲ್.ಸಿ / ದ್ವಿತೀಯ ಪಿ.ಯು.ಸಿ / ಪದವಿ ಅಂತಿಮ ವರ್ಷ (ಬಿಎ/ಬಿಎಸ್ಸಿ/ಬಿಕಾಂ/ ಬಿ.ಇಡಿ/ ಬಿಸಿಎ/ ಬಿಬಿಎಂ/ ಬಿಹೆಚ್‌ಎಂ/ಎಲ್‌ಎಲ್‌ಬಿ) ಅಂತಿಮ ಪೂರ್ವ (ಬಿಇ/ಎಂಬಿಬಿಎಸ್) ಪ್ರಥಮ ವರ್ಷದ ಸ್ನಾತಕೋತ್ತರ ಪರೀಕ್ಷೆ (ಎಂಎ/ ಎಂಎಸ್ಸಿ/ಎಂಕಾಂ/ಎಂಎಡ್) ಪರೀಕ್ಷೆಗಳಲ್ಲಿ ಕನಿಷ್ಠ ಶೇಕಡ60 ಅಂಕ ಪಡೆದ ವಿದ್ಯಾರ್ಥಿಗಳು ನಿಗಧಿತ ಅರ್ಜಿಗಳನ್ನು ದೃಢೀಕರಿಸಿದ ಅಂಕ ಪಟ್ಟಿಯೊಂದಿಗೆ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಪರಿಶೀಲಿಸಿ ಮೆರಿಟ್ ಆಧಾರದ ಮೇಲೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುವುದು. ಅರ್ಜಿ ನಮೂನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲದಿಂದ (www.schooleducation.kar.nic.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ನಿಧಿಗಳ ಕಛೇರಿಗೆ ತಲುಪಿಸಲು ಅಂತಿಮ ದಿನಾಂಕ 31.10.2016 ಆಗಿರುತ್ತದೆ. ತಡವಾಗಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

ಸಹಿ/– ಸಹನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು.

**ಪ್ರಪಂಚದಲ್ಲಿ ಶುಭದ ಮಾರ್ಗ ಬಹಳ ದುರ್ಗಮ ಮತ್ತು ಕಡಿದು. – ವಿವೇಕಾನಂದ**

# ಅಖಿಲ ಭಾರತ ಮಹಿಳಾ ಸಮನ್ವಯ ಸಭೆ

"ದೇಶಸೇವೆಯ ಕೆಲಸದಲ್ಲಿ ತೊಡಗುವ ನಾನಾ ಸಂಘಟನೆಗಳು ಪರಸ್ಪರ ಸಂಪರ್ಕ ಮತ್ತು ಸಮನ್ವಯದೊಂದಿಗೆ ಕಾರ್ಯ ನಡೆಸುವುದು ಅಗತ್ಯ. ಪ್ರತಿಯೊಬ್ಬ ಮಹಿಳೆ ನಾಗರಿಕಳಾಗಿ ಸಾಮಾಜಿಕ ಪ್ರಜ್ಞೆಯೊಂದಿಗೆ ರಾಷ್ಟ್ರಚಿಂತನೆ ಮಾಡುವಂತಾಗಬೇಕು." ಎಂದು ಇದೇ ಸೆಪ್ಟೆಂಬರ್ 17 ಮತ್ತು 18ರಂದು ಯು.ಪಿ. ಯ ಕಾನ್ಪುರದಲ್ಲಿ ನಡೆದ ಅಖಿಲಭಾರತ ಮಹಿಳಾ ಸಮನ್ವಯದ ಸಭೆಯ ನೇತೃತ್ವ ವಹಿಸಿದ್ದ ರಾಷ್ಟ್ರ ಸೇವಿಕಾ ಸಮಿತಿಯ ಪ್ರಮುಖರಾದ ಗೀತಾ ತಾಯಿಯವರು ತಿಳಿಸಿದರು.

ರಾಷ್ಟ್ರಸೇವಿಕಾ ಸಮಿತಿಯ ಸಂಚಾಲಕರಾದ ವಂದನೀಯ ಶಾಂತಕ್ಕ, ಸಂಘ ಪ್ರಮುಖರಾದ ಪ್ರಮೀಳಾತಾಯಿ, ಸಂಘ ಪ್ರಮುಖ ಪ್ರಚಾರಕರಾದ ಡಾ॥ ಮನಮೋಹನ್‌ಜೀ ಹಾಗೂ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಾರ್ಗದರ್ಶಿಗಳಾದ ಪ್ರೊ॥ ಅನಿರುದ್ಧ ದೇಶಪಾಂಡೆಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇದರಲ್ಲಿ ಇಪ್ಪತ್ತೈದು ಪ್ರಾಂತ್ಯಗಳ 34 ಸಂಘಟನೆಗಳು ಪಾಲ್ಗೊಂಡು 180 ಮಹಿಳಾ ಪ್ರತಿನಿಧಿಗಳು ಹಾಗೂ 15 ಮಂದಿ ಪುರುಷ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗುವುದರೊಂದಿಗೆ ಗಣ್ಯರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು.

ಅತಿಥಿಗಳನ್ನು ಸ್ವಾಗತಿಸಿ, ಪರಿಚಯ ಮಾಡಿ, ಸಮನ್ವಯ ಸಭೆಯ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದ ವಂದನೀಯ ಗೀತಾತಾಯಿಯವರು ಮೊದಲಿಗೆ ಇಡೀ ವರ್ಷದಲ್ಲಿ ಪ್ರಾಂತೀಯ ಕಾರ್ಯಕ್ರಮಗಳನ್ನು ನಡೆಸಿದ ವಿವಿಧ ಸಂಘಟನೆಗಳು ಅವುಗಳ ವರದಿಯೊಂದಿಗೆ ನಿವೇದನೆ ಮಾಡುವಂತೆ ತಿಳಿಸಿದರು. ರಾಷ್ಟ್ರಸೇವಿಕಾ ಸಮಿತಿ, ವನವಾಸಿ ಕಲ್ಯಾಣ ಸಮಿತಿ, ವಿದ್ಯಾಭಾರತೀ, ಸೇವಾ ಭಾರತೀ, ಭಾರತೀಯ ಮಜದೂರ್ ಸಂಘ, ಭಾರತೀಯ ಕಿಸಾನ್ ಸಂಘ, ಭಾರತೀಯ ಸ್ತ್ರೀ ಶಕ್ತಿ, ಭಾರತೀಯ ಶಿಕ್ಷಣ ಮಂಡಳಿ, ಭಾರತೀಯ ಜನತಾ ಪಕ್ಷ, ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ವಿಶ್ವಹಿಂದೂ ಪರಿಷತ್, ಆದಿಯಾಗಿ ಹಲವಾರು ಸಂಘಟನೆಗಳು ಇದರಲ್ಲಿದ್ದು ತಮ್ಮೆಲ್ಲಾ ವರದಿಗಳನ್ನು ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಡಾ॥ ಮನಮೋಹನ್‌ಜೀ ವೈದ್ಯರು ಸಂಘಟನಾಕಾರ್ಯದಲ್ಲಿ ಪ್ರಸಾರ ಮಾಧ್ಯಮದ ಪಾತ್ರದ ಮಹತ್ವದ ಕುರಿತು ಪ್ರಾತ್ಯಕ್ಷಿಕೆಯೊಂದಿಗೆ ತಿಳಿಸಿದರು.

ನಾನಾ ಸಂಘಟನೆಗಳು ಮಾಡಿಸಿದ ಕಾರ್ಯಕ್ರಮಗಳಲ್ಲಿ ಕೇರಳದ ಸ್ತ್ರೀ ಶಕ್ತಿ ಸಂಘಟನೆಯು ಮಂಡಿಸಿದ "ಸ್ವಾಭಿಮಾನ್ ಪರಿಕ್ರಮ ಯಾತ್ರಾ" ಎಂಬುದು 15 ದಿನಗಳ ಕಾಲ 35 ಕಿ.ಮೀ. ನಡಿಗೆಯಲ್ಲಿ ಬಾಲಕಿಯರಿಂದ 60 ಮೀರಿದ ಹಿರಿಯ ಮಹಿಳೆಯರೂ ಸೇರಿದಂತೆ 200000 ಮಂದಿ ಪಾಲ್ಗೊಂಡಿದ್ದರು ಎಂಬುದು ವಿಶಿಷ್ಟವಾಗಿತ್ತು. ಭಾ.ಜ.ಪ.ದ ಮಹಿಳಾ ಮೋರ್ಚಾದ ರಾಷ್ಟ್ರಾಧ್ಯಕ್ಷೆಯವರು ಮಹಿಳಾ ಅಭಿವೃದ್ಧಿಗಾಗಿ ದೇಶದಾದ್ಯಂತ ಯೋಜಿಸಿರುವ Skill development programme, 12 ರೂ.ಗಳ ವಿಮಾಯೋಜನೆ, ಮುದ್ರಾ ಯೋಜನೆ, ರಾಷ್ಟ್ರೀಯ ಮಹಿಳಾ ನೀತಿ ಮುಂತಾದ ಪ್ರಧಾನಮಂತ್ರಿ ಯೋಜನೆಗಳ ವಿವರವನ್ನು ನೀಡಿದ್ದು ತುಂಬ ಉಪಯುಕ್ತ ಮಾಹಿತಿಯಾಗಿತ್ತು.

ಎರಡು ದಿನದ ಕಾರ್ಯಕ್ರಮದ ಫಲಶ್ರುತಿಯಾಗಿ ಮುಂದಿನ ಕ್ರಿಯಾಸ್ವರೂಪವನ್ನು ಶಿಕ್ಷಣ, ಸಾಮಾಜಿಕ ಮತ್ತು ಇತರೆ ಎಂದು ಮೂರು ಕ್ಷೇತ್ರಗಳನ್ನಾಗಿ ವಿಭಾಗಿಸಿ ಯೋಜನಾ ಕಾರ್ಯಕ್ರಮಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ಭಾರತೀಯ ಶೈಕ್ಷಿಕ ಮಹಾಸಂಘದ ಮಾರ್ಗದರ್ಶಕರಾದ ಪ್ರೊ॥ ಅನಿರುದ್ಧ ದೇಶಪಾಂಡೆಯವರು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶಿಕ್ಷಕಿಯರನ್ನು ಕುರಿತು ಪ್ರತಿ ಶಿಕ್ಷಣಸಂಸ್ಥೆಯಲ್ಲಿ "ಗುರುವಂದನಾ" ಮತ್ತು "ಕರ್ತವ್ಯ ಬೋಧ" ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ನಡೆಸುವ ವ್ಯವಸ್ಥೆಯ ಜವಾಬ್ದಾರಿ ನಿರ್ವಹಿಸುವಂತೆ ತಿಳಿಸಿದರು.

ಸಮಾರೋಪದಲ್ಲಿ ಗೀತಾತಾಯಿಯವರು ಎಲ್ಲಾ ನಿವೇದನೆಗಳ ಪುನರಾವಲೋಕನ ಮಾಡುತ್ತಾ ಮಹಿಳೆ ಅತ್ಯಂತ ದಕ್ಷ ನಿರ್ವಾಹಕಿಯಾಗುತ್ತಾಳೆಂದು ಹೇಳುತ್ತಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ "ನಮ್ಮೆಲ್ಲಾ ಚಿಂತನೆಗಳನ್ನು ಸಾಮಾನ್ಯ ಮಹಿಳೆಯರಿಗೂ ತಲುಪಿಸಬೇಕು. ಆಗ ಮಾತ್ರ ನಮ್ಮ ಎಲ್ಲಾ ಶ್ರಮ ಸಫಲವಾಗುತ್ತದೆ" ಎಂದು ತಿಳಿಸಿದರು.

**ವರದಿ : ಬಿ. ಕೆ. ಮಮತಾ, ರಾಜ್ಯ ಮಹಿಳಾ ಪ್ರಮುಖರು**

## ಚಂದಾದಾರರಲ್ಲೊಂದು ಮನವಿ

**ಆತ್ಮೀಯರೇ,**

**ಕಳೆದ ಒಂದು ವರ್ಷದಿಂದ ನಿಮಗೆ ನಮ್ಮ ಪತ್ರಿಕೆ ತಲುಪುತ್ತಿದೆ. ಅನೇಕ ಚಂದಾದಾರರು ಪತ್ರಿಕೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ಪತ್ರ ಮುಖೇನ ತಿಳಿಸಿದ್ದಾರೆ. ಅನೇಕರು ಪತ್ರಿಕೆಯನ್ನು ಇನ್ನೂ ಚಂದಗೊಳಿಸುವ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಪತ್ರಿಕೆ ಹೆಚ್ಚು ಶಿಕ್ಷಕರನ್ನು, ಹೆಚ್ಚೆಚ್ಚು ಶಾಲೆಗಳನ್ನು ತಲುಪಬೇಕೆಂಬ ಬಯಕೆ ನಮ್ಮದು. ಆದರೆ ಈ ತಿಂಗಳಿಗೆ ನಿಮ್ಮ ಚಂದಾ ಹಣ ಮುಗಿದಿದೆ. ಪತ್ರಿಕೆಯನ್ನು ತಮಗೆ ಕಳುಹಿಸುವುದನ್ನು ಭಾರವಾದ ಮನಸ್ಸಿನಿಂದ ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ತಾವು ಕೃಪೆಮಾಡಿ ನವೆಂಬರ್ 10 ರೊಳಗೆ ವಾರ್ಷಿಕ 100 ರೂ ಚಂದಾಹಣವನ್ನು ನಮ್ಮ ವಿಳಾಸಕ್ಕೆ ಮನಿಆರ್ಡರ್ ಮೂಲಕ ಕಳುಹಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಪತ್ರಿಕೆಯನ್ನು ಆರ್.ಆರ್. ನಿಧಿಯಿಂದಲೂ ತರಿಸಿಕೊಳ್ಳಬಹುದು. ಅದರ ಆದೇಶ ಈ ಕೆಳಗೆ ನೀಡಿದೆ.**

ತಮ್ಮ ವಿಶ್ವಾಸಿ, ವ್ಯವಸ್ಥಾಪಕರು

➢ ಪುಟ 3 ರಿಂದ..... ಭಾರತ

ಚಂದ್ರನು ಸೂರ್ಯನನ್ನು ಮರೆ ಮಾಡುತ್ತಾನೆ (ಸೂರ್ಯಗ್ರಹಣ). ದೊಡ್ಡ ಪ್ರಮಾಣದ ಭೂಮಿಯ ನೆರಳು ಚಂದ್ರನನ್ನು ಮರೆ ಮಾಡುತ್ತದೆ (ಚಂದ್ರಗ್ರಹಣ).

ಖಗೋಲ ವಿಜ್ಞಾನಕ್ಕೆ ಭಾರತೀಯರ ಮಹತ್ತ್ವಪೂರ್ಣವಾದ ಇನ್ನೊಂದು ಕೊಡುಗೆಯೆಂದರೆ ಗ್ರಹಗಳು, ಅವುಗಳಿರುವ ದೂರ, ಚಲಿಸುವ ಪಥ. ವಿಷ್ಣುಪುರಾಣದಲ್ಲಿ ಈ ಕುರಿತು ಸಾಕಷ್ಟು ವಿವರಣೆಯಿದ್ದರೂ (ವಿ.ಪು.ಸಂ. 1, ಅಧ್ಯಾಯ 7, ಶ್ಲೋಕ 3–12) ಇದು ಆಧುನಿಕ ವಿಜ್ಞಾನದ ವಿವರಣೆಗಿಂತ ಭಿನ್ನವಾಗಿದೆ. ಆದರೂ ಆ ದಿಸೆಯಲ್ಲಿ ನಮ್ಮವರು ಯೋಚಿಸಿದ್ದರು ಎಂಬುದಂತೂ ನಿಜ. ಇನ್ನೊಂದು ಸಂಶೋಧನೆ 27 ಮಹಾನಕ್ಷತ್ರಗಳು (ಅಶ್ವಿನಿ–ರೇವತಿ), ಹನ್ನೆರಡು ನಕ್ಷತ್ರ ರಾಶಿಗಳ (ಮೇಷ...ಮೀನ), ಭೂಮಿಯ ಚಲನೆಯಿಂದಾಗಿ ಸೂರ್ಯನು ಈ ನಕ್ಷತ್ರರಾಶಿಗಳನ್ನು ತಿಂಗಳಿಗೊಂದರಂತೆ ದಾಟಿ ಹೋಗುವನು. ಆ ನಕ್ಷತ್ರ ರಾಶಿಗಳಿಗೆ ನಕ್ಷತ್ರಗಳ ಜೋಡಣೆಯು ಅದಕ್ಕನುಸಾರವಾಗಿ ಹೆಸರು ಎಲ್ಲವೂ ವೈಜ್ಞಾನಿಕವಾಗಿದೆ. ಉದಾ: ವೃಶ್ಚಿಕ ರಾಶಿಯಲ್ಲಿ ನಕ್ಷತ್ರಗಳ ಜೋಡಣೆ ಚೇಳನ್ನು ಹೋಲುತ್ತದೆ. ಇನ್ನೊಂದು ಶುದ್ಧ ವೈಜ್ಞಾನಿಕ ಚಿಂತನೆಯೆಂದರೆ ಚೈತ್ರಾದಿ ತಿಂಗಳುಗಳಿಗೆ ಹೆಸರಿಸುವುದು. ಚಂದ್ರ, ಭೂಮಿ ಚಲನೆಯ ಕಾರಣ ಬೇರೆ ಬೇರೆ ಹುಣ್ಣಿಮೆಯಂದು ಚಂದ್ರ ಬೇರೆ ಬೇರೆ ಮಹಾನಕ್ಷತ್ರದ ನೇರ ಬರುವನು. ಆ ಹುಣ್ಣಿಮೆಯ ಆ ತಿಂಗಳನ್ನು ಆ ನಕ್ಷತ್ರ ಹೆಸರಿನಿಂದ ಕರೆದಿರುವರು. ಉದಾ: ಯಾವ ತಿಂಗಳ ಹುಣ್ಣಿಮೆಯಂದು ಚಂದ್ರನು ಚಿತ್ತಾ ನಕ್ಷತ್ರದಲ್ಲಿರುವನೋ ಆ ತಿಂಗಳನ್ನು ಚೈತ್ರಾ ಎಂದು ಕರೆದರು. ವಿಶಾಖಾ ನಕ್ಷತ್ರದ ಹುಣ್ಣಿಮೆಯ ತಿಂಗಳನ್ನು ವೈಶಾಖ ಎಂದು ಕರೆಯುತ್ತಾರೆ. ಆದರೆ ಯುರೋಪ್ ಕಾಲಗಣನೆಯ ಜನವರಿ–ಡಿಸೆಂಬರ್ ತಿಂಗಳುಗಳನ್ನು ದೇವರ ಹೆಸರಿನಲ್ಲಿ ಸಂಖ್ಯಾಸೂಚಕವಾಗಿ ಕರೆದಿದ್ದಾರೆ. ನಮ್ಮ ತಿಂಗಳುಗಳು ಚಂದ್ರ, ನಕ್ಷತ್ರ, ಸೂರ್ಯ ಈ ಖಗೋಳ ಕಾರ್ಯಗಳ ಚಲನೆಯ ನಿರ್ದಿಷ್ಟ ಅವಧಿಗಳನ್ನು ಸೂಚಿಸುತ್ತವೆ. ಇಲ್ಲೂ ಖಗೋಳ ವಿಜ್ಞಾನ ಪರಿಗಣಿಸಿದೆ. ಯುರೋಪಿನ ಕಾಲಗಣನೆಯಲ್ಲಿ ತಿಂಗಳಿಗೂ, ಖಗೋಳ ವಿಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ. ಕೇವಲ ಒಂದು ವರ್ಷವನ್ನು 12 ತಿಂಗಳುಗಳನ್ನಾಗಿ ವಿಭಾಗಿಸಿರುವುದು ಅಷ್ಟೇ.

ಹೀಗೆ ನಮ್ಮ ದೃಷ್ಟಿಕೋನ ಪ್ರಾಚೀನ ಕಾಲದಿಂದಲೂ ವೈಜ್ಞಾನಿಕವಾಗಿಯೇ ಬೆಳೆದುಕೊಂಡುಬಂದಿದೆ. ಅದರ ಫಲವಾಗಿಯೇ ನಾವು ಮಣ್ಣಿನಲ್ಲಿ ದೊರೆಯುವ ಅನೇಕ ಅದಿರಿನಿಂದ ಲೋಹಗಳನ್ನು ತಯಾರಿಸಿದೆವು, ಬಳಸಿದೆವು. ಮಿಶ್ರಲೋಹ ತಯಾರಿಸುವ ವಿಧಾನ ಕಂಡುಹಿಡಿದೆವು. ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಸತು, ತವರ, ಉಕ್ಕು, ಬಂಗಾರ, ಬೆಳ್ಳಿ, ಕಂಚು, ಹಿತ್ತಾಳೆ ಕಂಡುಕೊಂಡೆವು.

ವೈದ್ಯಕೀಯ ಶಾಸ್ತ್ರದಲ್ಲಂತೂ 2600 ವರ್ಷಗಳಷ್ಟು ಹಿಂದೆಯೇ ಶಸ್ತ್ರಚಿಕಿತ್ಸೆ, ಅದಕ್ಕೆ ಬೇಕಾಗುವ ಲೋಹಗಳ ತಯಾರಿ, ಶಸ್ತ್ರಗಳ ನಿರ್ಮಾಣ, ಪ್ಲಾಸ್ಟಿಕ್ ಸರ್ಜರಿಯಂತಹ ಆಧುನಿಕ ವಿಜ್ಞಾನವನ್ನು 'ನಾಸಿಕ ಸುರೂಟಿ ಶಸ್ತ್ರಚಿಕಿತ್ಸಾ'ದಲ್ಲಿ ಅಳವಡಿಸಿರುವುದು ನಮ್ಮ ಸಂಶೋಧನಾ ಮಾನಸಿಕತೆಗೆ ಸಾಕ್ಷಿ. ವಿವಿಧ ರೀತಿಯ ಅಸ್ತ್ರ–ಶಸ್ತ್ರಗಳ ತಯಾರಿ, ಅವುಗಳ ನಿಖರ ಪ್ರಯೋಗ, ಉದಾ: ಬಿಲ್ಲು, ಖಡ್ಗ, ಗದಾ, ಪರಿಘ, ಮುಸಲ, ಬಾಣ, ಚಕ್ರ ಇತ್ಯಾದಿಗಳು.

'ಸರಿಗಮಪದನಿ' ಈ ಸಪ್ತಸ್ವರಗಳನ್ನು ಆಧಾರವಾಗಿರಿಸಿ ಕೊಂಡು ಸಂಗೀತ ರಚನೆ, ನಾಟ್ಯ ಸಂಯೋಜನೆ, ವಿವಿಧ ವಾದ್ಯಗಳು, ಉದಾ: ತಂತು ವಾದ್ಯ, ಗಾಳಿ ವಾದ್ಯ (ಕೊಳಲು ಇತ್ಯಾದಿ), ಬೆರಳು ವಾದ್ಯ–ಮೃದಂಗ ಮುಂತಾದ ಹಾಗೂ ಎಲ್ಲಾ ಪ್ರಕಾರಗಳಲ್ಲೂ ಸರಿಗಮಪದನಿ–ಸ್ವರ ಆಧಾರಿತ ತಾಳ, ಲಯ, ಧ್ವನಿ ಹಾಗೂ ಇವೆಲ್ಲದರ ಮಾಧುರ್ಯಪೂರ್ಣ ಸಂಯೋಜನೆ, ಭಾರತದ ಸುಸಂಸ್ಕೃತ, ಸುವ್ಯವಸ್ಥಿತ, ಸಂಶೋಧನೆಗೆ ಹಿಡಿದ ಕನ್ನಡಿಯಾಗಿದೆ.

ನಮ್ಮ ನಿತ್ಯದ ಅನೇಕ ಸಂಪ್ರದಾಯ, ಹಾರ, ವಿಹಾರ, ನಡೆ–ನುಡಿಗಳಲ್ಲಿ ಸಾಕಷ್ಟು ವೈಜ್ಞಾನಿಕ ಅಂಶಗಳನ್ನು ಗುರುತಿಸ ಬಹುದು. ನಮ್ಮ ಗೃಹಲಕ್ಷಣಗಳು, ವಾಸ್ತುವಿನ್ಯಾಸ ಮುಂತಾದವು ಗಳಲ್ಲಿಯೂ ವಿಜ್ಞಾನ ಅಡಗಿದೆ. ಹಾಲನ್ನು ಕಾಯಿಸಿಟ್ಟರೆ ಕೆಡುವುದಿಲ್ಲವೆಂದು ಪಾಶ್ಚಾತ್ಯರ ಲೂಯಿ ಪಾಶ್ಚರ್ ಹೇಳುವ ಸಾವಿರಾರು ವರ್ಷಗಳ ಮೊದಲೇ ನಾವು ಹಾಲು ಕಾಯಿಸಿ ಹೆಪ್ಪು ಹಾಕಿ ಮೊಸರು ಕಡೆದು ಬೆಣ್ಣೆ ತೆಗೆದು ತುಪ್ಪ ಮಾಡಿ ಬಳಸಿದವರು. ಅಗಸ್ತ್ಯರು ವಿದ್ಯುತ್ ತಯಾರಿಸಿದ ಬಗ್ಗೆ, ಅನೇಕ ಯಂತ್ರಗಳನ್ನು ತಯಾರಿಸಿದ ಬಗ್ಗೆ (ನ್ಯೂಟನ್‌ಗಿಂತ), ಪರಾಶರರು ವೃಕ್ಷಾಯುರ್ವೇದಗಳಲ್ಲಿ ಜೀವಕೋಶಗಳ ಬಗ್ಗೆ ಹೇಳಿರುವುದು, ಲಲಿತಾ ವಿಸ್ತಾರ ಗ್ರಂಥದಲ್ಲಿ ಪರಮಾಣುವಿನ ಗಾತ್ರ 7–10 ಎಂದು ಹೇಳಿರುವ ಬಗ್ಗೆ, ಕಣಾದರ ಚಲನೆಯ ನಿಯಮಗಳ ಬಗ್ಗೆ ನನ್ನ ಬೇರೆ ಬೇರೆ ಲೇಖಾಂಕದಲ್ಲಿ ಓದಿದ್ದೀರಿ.

ನಮಗೆ ಮೇಲಿನ ಸಂಗತಿಗಳೇ ಅಲ್ಲದೆ ನೌಕಾ ವಿದ್ಯೆ, ವಿಮಾನ ಶಾಸ್ತ್ರ, ಧ್ವನಿ(ವಾಕ್) ವಿಜ್ಞಾನ, ಲಿಪಿ ವಿಜ್ಞಾನ, ವನಸ್ಪತಿ ವಿಜ್ಞಾನ ಮುಂತಾದ ಇನ್ನೂ ಅನೇಕ ವಿಷಯಗಳ ಕುರಿತಾದ ವೈಜ್ಞಾನಿಕ ತಿಳುವಳಿಕೆಯಿತ್ತು ಎಂಬುದನ್ನು ಈಗ ಎಲ್ಲರೂ ಮನಗಾಣುತ್ತಿದ್ದಾರೆ.

ಮೇಲಿನ ಎಲ್ಲ ಅಂಶಗಳನ್ನು ಸರಿಯಾಗಿ ಗಮನಿಸಿದಾಗ ನಮಗೆ ನಮ್ಮ ಪೂರ್ವಜರ ಬಗ್ಗೆ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ. ಅವರು ಅತ್ಯಂತ ವಿಶಾಲವಾದ, ವ್ಯಾಪಕವಾದ, ಸಾರ್ವಕಾಲಿಕವಾದ ಮತ್ತು ವಸ್ತುನಿಷ್ಠವಾದ ನೆಲೆಗಟ್ಟಿನ ಮೇಲೆ ವಿಜ್ಞಾನವನ್ನು ಕಂಡುಕೊಂಡರು ಎನ್ನುವುದು. ಅವರ ಚಿಂತನೆಯ ಮೂಸೆಯಲ್ಲಿ ಮೇಲೆ ಉಲ್ಲೇಖಿಸದ ಇನ್ನೋ ಎಷ್ಟೋ ವೈಜ್ಞಾನಿಕ ಸಂಶೋಧನೆಗಳೂ ಮೂಡಿಬಂದಿವೆ, ರೂಪು ಪಡೆದಿವೆ, ಕೆಲವು ನಷ್ಟವಾಗಿವೆ, ಕೆಲವನ್ನು ಭ್ರಷ್ಟಗೊಳಿಸಲಾಗಿದೆ. ಉಳಿದದ್ದನ್ನಾದರೂ ಉಳಿಸೋಣ, ಬೆಳೆಸೋಣ. ●

➢ ಪು

➢ ಪುಟ 5 ರಿಂದ..... ಕನ್ನಡ ರಾಜ್ಯೋತ್ಸವ

ಆರೋಗ್ಯಕರವಾಗಿ ಉಳಿದರೆ ತಾನೆ ಅದು ಮತ್ತೆ ಮತ್ತೆ ಹೊಸ ಚೈತನ್ಯ ಪಡೆಯಲು ಸಾಧ್ಯವಾಗುತ್ತದೆ? ಇಂದು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡದ ಶೋಚನೀಯ ಸ್ಥಿತಿಯನ್ನು ಕಂಡಾಗ ವಿಷಾದವಾಗುತ್ತದೆ. 'ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡವೆನೆ ಕಿವಿ ನಿಮಿರುವುದು' ಎಂಬ ಕವಿವಾಣಿ ಮತ್ತೆ ಮತ್ತೆ ನೆನಪಾಗುತ್ತದೆ. ನಾಡು–ನುಡಿಯ ಬಗೆಗೆ ಅಭಿಮಾನ, ಕಾಳಜಿ ಇರಬೇಕೆಂದು ಅದೆಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಕಲಿಸುತ್ತಿದ್ದಾರೆ? ಅಷ್ಟೇ ಏಕೆ? ಎಷ್ಟು ಮನೆಗಳಲ್ಲಿ ಭಾಷಾಕಲಿಕೆ ಸುಸಂಸ್ಕೃತ ವ್ಯಕ್ತಿಯಾಗುವಲ್ಲಿ ಒಂದು ಅತ್ಯವಶ್ಯಕವಾದ ಅಂಶವೆಂಬ ಬಗ್ಗೆ ಅರಿವು ನೀಡುತ್ತಿದ್ದಾರೆ? ಅಂಕಗಳು, ಉದ್ಯೋಗ, ಕೈತುಂಬ ಹಣ ಎಂದು ಸಂಪೂರ್ಣವಾಗಿ ಒಂದು 'ಮೆಟೀರಿಯಲಿಸ್ಟಿಕ್' ಪ್ರಪಂಚದಲ್ಲಿಯೇ ಬದುಕಬಯಸುತ್ತದಲ್ಲದೆ ನಾಡು– ನುಡಿಗೆ ಸಲ್ಲಿಸುವ ಸೇವೆಯನ್ನು ನೆನಪಿಸುವ ಕಾರ್ಯವನ್ನು ಎಷ್ಟು ಮಂದಿ ಪಾಲಕರು ಮಾಡುತ್ತಿದ್ದಾರೆ? ಕಲಿಸುವ, ಕಲಿಯುವ ಯಾರಲ್ಲೂ ಮೇಲೆ ಹೇಳಿದ ಕಾಳಜಿಯೇ ಇಲ್ಲ. 10 ವರ್ಷ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಲ್ಲಿ ಎಷ್ಟು ಮಂದಿ ಶುದ್ಧವಾಗಿ ನಮ್ಮ ಕನ್ನಡವನ್ನು (ಕೆಲವರಿಗೆ ಮಾತೃಭಾಷೆಯೂ ಆಗಿರುತ್ತದೆ) ಓದಿ, ಬರೆದು ಮಾತನಾಡಲು ಬರುತ್ತದೆ? ಇಲ್ಲಿ ತಪ್ಪು ಯಾರದು?

ಬೇರೆ ಯಾವ ರಾಜ್ಯದಲ್ಲಿಯೂ ಇಂತಹ ಅನಾದರದ ಧೋರಣೆ ಇಲ್ಲ. ಹಾಗೆ ನೋಡಿದರೆ ನಮ್ಮ ಕನ್ನಡ ಭಾಷೆಯಲ್ಲಿ ಪ್ರತಿಭಾವಂತರಿಗೆ, ವಿದ್ವಾಂಸರಿಗೆ ಕೊರತೆಯಿಲ್ಲ. ಧಂಡಿಯಾಗಿಯೇ ಇದ್ದಾರೆ. ನಾಡಿನ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಪರಂಪರೆಯ ಹಿರಿಮೆ ಸಮೃದ್ಧವಾಗಿದೆ. ಇವೆಲ್ಲದರ ಕನಿಷ್ಠ ಪ್ರಮಾಣದ ಮಾಹಿತಿಯಾದರೂ ಯುವಜನಾಂಗಕ್ಕೆ, ಮಕ್ಕಳಿಗೆ ನೀಡಬೇಕಲ್ಲವೆ? ಕುವೆಂಪು, ಬೇಂದ್ರೆ ಇದ್ದಾರೋ, ಇಲ್ಲವೋ ತಿಳಿಯದಷ್ಟು ಅಮಾಯಕತೆ ಅಥವಾ ಅಜ್ಞಾನ ಅವರಲ್ಲಿರಲು ಕಾರಣ ಯಾರು?

ಪ್ರಭುತ್ವ ಮತ್ತು ಸಮಾಜ ಎರಡೂ ಕಡೆಯಿಂದ ಕಾರ್ಯೋನ್ಮುಖವಾದಾಗಲೇ ಈ ನಾಡು–ನುಡಿಯ ಅಭಿಮಾನ ವೆಂಬುದು ತಲೆಮಾರಿನಿಂದ ತಲೆಮಾರಿಗೆ ಪ್ರಸಾರವಾಗುತ್ತ ಹೋಗುತ್ತದೆ. ಈಗಂತೂ ರಾಜ್ಯೋತ್ಸವದ ಆಚರಣೆ ಒಂದು. ಪ್ರತಿಷ್ಠೆಯ, ಆಡಂಬರದ ಕಾರ್ಯಕ್ರಮವಾಗಷ್ಟೇ ಬಹುತೇಕ ಕಡೆಗಳಲ್ಲಿ ನಡೆದಿದೆ. ಅದು ನವೆಂಬರ್ ಒಂದರಿಂದ ಡಿಸೆಂಬರ್ ಕಡೆಯವರೆಗೂ ನಡೆಯುತ್ತ ತನ್ನ ಸಾಂಕೇತಿಕತೆಯನ್ನಾಗಲೀ, ಮಹತ್ವವನ್ನಾಗಲೀ ಯುವಜನರಲ್ಲಿ ಮೂಡಿಸುವಲ್ಲಿ ಪರಿಣಾಮಕಾರಿಯಾಗುತ್ತಿಲ್ಲ. ಪೈಪೋಟಿಯಿಂದ ಹಣ ಖರ್ಚುಮಾಡುವುದಷ್ಟೇ ಆಗಿದೆ.

ನವೆಂಬರ್ 14 ಮಕ್ಕಳ ದಿನಾಚರಣೆಯ ಸಡಗರ ಇಡೀ ದೇಶದಲ್ಲಿ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು, ನಿಜ. ಸುಸಂಸ್ಕೃತ ಪ್ರಜೆಗಳನ್ನಾಗಿ ಒಳ್ಳೆಯ ಮನುಷ್ಯರನ್ನಾಗಿ ಬೆಳೆಸಲು, ಅವರ ಆರೋಗ್ಯಕ್ಕೆ, ಭದ್ರತೆಗೆ, ಅವರಲ್ಲಿ ನೈತಿಕ ಮೌಲ್ಯಗಳನ್ನು ತುಂಬಲು ನಾವೇನು ಮಾಡುತ್ತಿದ್ದೇವೆ? ಪ್ರತಿದಿನ ಪತ್ರಿಕೆಯಲ್ಲಿ ಬರುವ ಸುದ್ದಿಗಳಲ್ಲಿ ಮಕ್ಕಳ ಅಭದ್ರತೆ ಮನೆಯಲ್ಲಿ, ಶಾಲೆಯಲ್ಲಿ ಯಾವ ರೀತಿ ಚಿಂತಿಸುವಂತೆ ಮಾಡಿದೆ ಎಂಬುದನ್ನು ಓದುತ್ತೇವೆ. ಇಂತಹ ದೌರ್ಜನ್ಯ ಎಸಗುವವರಲ್ಲಿ ವಿದ್ಯಾವಂತರು, ಅವಿದ್ಯಾವಂತರು, ನಗರ, ಹಳ್ಳಿಗಳ ಜನರೆಲ್ಲರ ಪಾತ್ರವಿದೆಯೆಂಬುದು ಖೇದದ ಸಂಗತಿ. ಅಪ್ರಾಪ್ತ ವಯಸ್ಸಿನ ಬಾಲಕಿಯರು ಬಲಿಪಶು ಗಳಾಗುವುದು ಒಂದು ರೀತಿಯಾದರೆ, ಬಾಲಕರು ಮತ್ತೊಂದು ಬಗೆಯಲ್ಲಿ ಆರೋಗ್ಯಕರ ಬದುಕಿನಿಂದ ದೂರವಾಗುತ್ತಿದ್ದಾರೆ. ಮಾಧ್ಯಮಗಳಲ್ಲಿ ಬಿತ್ತರವಾಗುವ ಬೇಕಿಲ್ಲದ ಅಂಶಗಳು ಉದ್ಯೋಗ, ಕೆರಿಯರ್, ಹಣ ಎಂದು ಮಕ್ಕಳ ಬೇಕು, ಬೇಡಗಳತ್ತ ಲಕ್ಷ್ಯ ನೀಡಲು ಸಮಯವಿಲ್ಲವೆನ್ನುವ ಪಾಲಕರ ಅಜ್ಞಾನ, ಅನಾಥ ಪ್ರಜ್ಞೆಯಿಂದಲೂ, ಬೇಡದ ವಿಚಾರಗಳನ್ನು ಬಲವಂತವಾಗಿ ತಲೆಗೆ ತುಂಬಿಕೊಳ್ಳುವುದರಿಂದಲೂ ಬಾಲಕರು ಸಮಾಜಕಂಟಕ ರಾಗುವಂತೆ ಮಾಡುತ್ತಿದೆ. ತಮ್ಮ ಸಮಯವನ್ನು ಕೊಡಲಾಗದ ಉದ್ಯೋಗಸ್ಥ ತಂದೆ ತಾಯಿಗಳು ಹಣದಿಂದಲೇ ಎಲ್ಲವನ್ನೂ ಸರಿಪಡಿಸಬಹುದೆಂಬ ತಪ್ಪು ತಿಳುವಳಿಕೆಯಿಂದ ಆ ಮಕ್ಕಳಿಗೆ ಬೇಕೆಂದುದನ್ನೆಲ್ಲಾ ಕೊಡಿಸಿ ನಿರಾಳವಾಗುತ್ತಾರೆ. ಆದರೆ ಅವರಲ್ಲಿ ಬೆಳೆಸಬೇಕಾದ ಸಮಾಜಮುಖೀ ಮನೋಭಾವ, ರಾಷ್ಟ್ರಾಭಿಮಾನ, ಭಾಷಾಭಿಮಾನದ ಮಹತ್ತ್ವ ವನ್ನು ಮರೆತುಬಿಡುತ್ತಾರೆ. ಈ ಎಲ್ಲ ತಪ್ಪುಗಳು ಶಿಕ್ಷಣ ಸಂಸ್ಥೆಗಳಲ್ಲಿ ಮತ್ತೊಂದು ರೀತಿಯಲ್ಲಾಗುತ್ತದೆ. ಅಲ್ಲಿ ಅಂಕಗಳಿಗೆ ಮಾತ್ರ ಮಹತ್ತ್ವ. ನೈತಿಕತೆಗಿಲ್ಲ, ಮನಸ್ಸಿನ ಆರೋಗ್ಯಕರ ಬೆಳವಣಿಗೆಗಿಲ್ಲ. ಒಟ್ಟಾರೆ ಎಲ್ಲದರ ಫಲಿತಾಂಶ ಮಕ್ಕಳ ಸುರಕ್ಷತೆಗಾಗಿ ಪ್ರತಿದಿನ ಪಾಲಕರು ಆತಂಕಪಡುವಂತಾಗಿದೆ. ಇನ್ನು ಮಕ್ಕಳ ದಿನಾಚರಣೆಗೆ ಯಾವ ಅರ್ಥವಿದೆ?

ಮಕ್ಕಳ ಬದುಕನ್ನು ಉತ್ತಮವಾಗಿ ರೂಪಿಸಲು, ಅವರ ಭದ್ರತೆಗೆ, ಆರೋಗ್ಯಕರ ಕಾರ್ಯಕ್ರಮಗಳನ್ನು ಆಯೋಜಿಸಿ, ಅದೆಲ್ಲದರ ಉಪಯೋಗ ಅವರಿಗಾಗುವಂತಾದಾಗ ಈ ಆಚರಣೆಗಳು ಅರ್ಥಪೂರ್ಣವೆನಿಸಿಕೊಳ್ಳುತ್ತದೆ.

●

## ಶ್ರದ್ಧಾಂಜಲಿ

**ನಮ್ಮ ಸಂಘದ ಹಿತೈಷಿಗಳಾದ ಶ್ರೀ ಕೃ.ಗೋಪಿನಾಥ್‌ರವರು ದಿನಾಂಕ:4–10–2016 ಮಂಗಳವಾರದಂದು ದೈವಾಧೀನರಾಗಿದ್ದಾರೆ. ಶ್ರೀಯುತರು ಮಾನ್ಯ ಕೃ. ನರಹರಿಯವರ ಸಹೋದರ. ಮೃತರ ಆತ್ಮಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಚಿರಶಾಂತಿಯನ್ನು ಕೋರುತ್ತದೆ.**

# ಭಾರತದಲ್ಲಿನ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಅವಲೋಕನ



ಭಾರತ ಸರ್ಕಾರವು 14 ವರ್ಷದೊಳಗಿನವರ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡುತ್ತಿದೆ. ಮಕ್ಕಳನ್ನು ಅಸುರಕ್ಷಿತ ಜಾಗಗಳಿಂದ ರಕ್ಷಿಸುವುದಕ್ಕಾಗಿ ಭಾರತ ಸರ್ಕಾರವು ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇದಿಸಿದೆ. ಆದರೂ ಸಾಮಾಜಿಕ ಸ್ಥಿತಿ ಮತ್ತು ಆರ್ಥಿಕ ಅಸಮತೋಲನದಿಂದ ಶಿಕ್ಷಣ ನೀಡುವುದು ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸುವುದು ಕಷ್ಟವಾಗಿದೆ. ಪ್ರಾಥಮಿಕ ಹಂತದಲ್ಲಿ ಶೇ.80 ರಷ್ಟು ಮಾನ್ಯತೆ ಪಡೆದ ಶಾಲೆಗಳನ್ನು ಸರ್ಕಾರ ನಿಯಂತ್ರಿಸುತ್ತದೆ.

ಇಂದಿನ ಶಿಕ್ಷಣ ವ್ಯವಸ್ಥೆ ಬೃಹತ್ತಾದ ಕಂದಕದಿಂದ ನರಳುತ್ತಿದೆ. ಆ ಕಂದಕ ಯಾವುದೆಂದರೆ ಗರಿಷ್ಟ ವಿದ್ಯಾರ್ಥಿಗಳು ಮತ್ತು ಕನಿಷ್ಟ ಶಿಕ್ಷಕರ ಅನುಪಾತ, ಆರ್ಥಿಕ ವ್ಯವಸ್ಥೆಯ ಕೊರತೆ ಮತ್ತು ಕನಿಷ್ಟ ಮಟ್ಟದ ಶಿಕ್ಷಕರ ತರಬೇತಿ. ಈ ಕಂದಕಕ್ಕೆ ಪ್ರಮುಖ ಕಾರಣವೆಂದರೆ ಸಂಪನ್ಮೂಲಗಳ ಕೊರತೆ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆ. ನಮ್ಮ ದೇಶದಲ್ಲಿ 5816673 ಪ್ರಾಥಮಿಕ ಶಿಕ್ಷಕರಿದ್ದಾರೆಂದು 2011ರಲ್ಲಿ ಭಾರತ ಸರ್ಕಾರ ಬಿಡುಗಡೆ ಮಾಡಿದ ಅಂಕಿ–ಅಂಶಗಳಿಂದ ತಿಳಿಯುತ್ತದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು 2009 ರ ಪ್ರಕಾರ 6–14 ವರ್ಷದೊಳಗಿನವರಿಗೆ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರವು ಹಲವು ಪ್ರಯತ್ನಗಳನ್ನು ಮಾಡಿತು. ಪ್ರಸ್ತುತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗೆ ಜೀವ ತುಂಬಲು ಮತ್ತು ಪುನರ್ ರಚಿಸುವುದರೊಂದಿಗೆ ಡಿ.ಇ.ಆರ್.ಪಿ.ಎಂಬ ಕಾರ್ಯಕ್ರಮವನ್ನು 1994 ರಲ್ಲಿ ಜಾರಿಗೊಳಿಸಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶ ಭಾರತದಲ್ಲಿನ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದು. ಈ ಯೋಜನೆಗೆ ಕೇಂದ್ರ ಸರ್ಕಾರವು ಶೇ. 85 ರಷ್ಟು ಅನುದಾನ ನೀಡಿದರೆ ಇನ್ನುಳಿದ ಶೇ.15 ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ನೀಡುತ್ತದೆ. ಈ ಯೋಜನೆಯಲ್ಲಿ 84000 ಪರ್ಯಾಯ ಶಾಲೆಗಳನ್ನು ಒಳಗೊಂಡಂತೆ ಒಟ್ಟು 160000 ಹೊಸ ಶಾಲೆಗಳನ್ನು ಪ್ರಾರಂಭ ಮಾಡಲಾಯಿತು. ಈ ಯೋಜನೆಯನ್ನು ಯು.ನಿ.ಸಿ.ಇ.ಎಫ್. ಸೇರಿದಂತೆ ಇತರೆ ಅಂತರರಾಷ್ಟ್ರೀಯ ಸಂಸ್ಥೆಗಳು ಬೆಂಬಲಿಸಿದವು. ಕೆಲವೊಂದು ರಾಜ್ಯಗಳಲ್ಲಿ ಈ ಯೋಜನೆಯಿಂದ ಕಳೆದ ಮೂರು ವರ್ಷಗಳಲ್ಲಿ ಸಮಗ್ರ ದಾಖಲಾತಿ ಪ್ರಮಾಣ ಶೇ. 93ರಿಂದ 95ಕ್ಕೆ ಏರಿಕೆಯಾಯಿತು. ಶಿಕ್ಷಣದ ಸಾರ್ವತ್ರಿಕರಣಕ್ಕೆ ಪ್ರಸ್ತುತ ಇರುವ ಯೋಜನೆ ಎಂದರೆ ಸರ್ವ ಶಿಕ್ಷಣ ಅಭಿಯಾನ. ಇದು ಪ್ರಪಂಚದ ಅತ್ಯಂತ ಬೃಹತ್ ಯೋಜನೆ. ಇದರಿಂದ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಏರಿಕೆಯಾಯಿತೇ ಹೊರತು ಶಿಕ್ಷಣದ ಗುಣಮಟ್ಟದಲ್ಲಿ ಬದಲಾವಣೆಯಾಗಲಿಲ್ಲ.

ಭಾರತದಲ್ಲಿ ಬ್ರಿಟಿಷರ ಪ್ರಾಬಲ್ಯದಿಂದಾಗಿ ಸರ್ಕಾರಿ ಶಾಲೆಯು ಸರ್ಕಾರೇತರ ಸಂಸ್ಥೆಯನ್ನು ಒಳಗೊಂಡಿರುತ್ತದೆ. ಹಲವಾರು ಖಾಸಗಿ ವಲಯ ಶಾಲೆಗಳು 'ಸರ್ಕಾರಿ ಶಾಲೆಗಳು' ಎಂಬ ಹಣೆಪಟ್ಟಿಯನ್ನು ಹೊಂದಿರುತ್ತವೆ. ಉದಾಹರಣೆಗೆ ದೆಹಲಿ ಸರ್ಕಾರಿ ಶಾಲೆ, ಫ್ರಾಂಕ್ ಆಂಥೋನಿ ಸರ್ಕಾರಿ ಶಾಲೆ. ಮಧ್ಯಮ ವರ್ಗದ ಬಹುತೇಕ ಜನರು ಈ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾರೆ. ಈ ಶಾಲೆಗಳ ಶಿಕ್ಷಣದ ಮಾಧ್ಯಮ ಇಂಗ್ಲಿಷ್. ಆದರೆ ಹಿಂದಿ /ರಾಜ್ಯದ ಸ್ಥಳೀಯ ಭಾಷೆಯನ್ನು ಕಡ್ಡಾಯವಾಗಿ ಒಂದು ವಿಷಯವನ್ನಾಗಿ ಅಭ್ಯಸಿಸಬೇಕು.

ಪ್ರಸ್ತುತ ಅಂದಾಜಿನ ಪ್ರಕಾರ ಶೇ. 80ರಷ್ಟು ಶಾಲೆಗಳು ಸರ್ಕಾರಿ ಶಾಲೆಗಳು .ಸಾರ್ವಜನಿಕ ಶಿಕ್ಷಣದ ಕನಿಷ್ಟ ಗುಣಮಟ್ಟದ ಫಲವಾಗಿ ಶೇ.27ರಷ್ಟು ಭಾರತೀಯ ವಿದ್ಯಾರ್ಥಿಗಳು ಖಾಸಗಿ ವಲಯದಿಂದ ಶಿಕ್ಷಿತರಾಗುತ್ತಾರೆ. ಶೇ.50 ಕ್ಕಿಂತ ಹೆಚ್ಚು ಮಕ್ಕಳು ನಗರ ಪ್ರದೇಶಗಳಲ್ಲಿ ಖಾಸಗಿ ಶಾಲೆಗೆ ದಾಖಲಾಗಿ ಶಿಕ್ಷಣ ಪಡೆದರೆ, ಗ್ರಾಮೀಣ ಪ್ರದೇಶದಲ್ಲಿ ಸರಿಸುಮಾರು ಶೇ. 20ರಷ್ಟು ವಿದ್ಯಾರ್ಥಿಗಳು ಖಾಸಗಿ ಶಾಲೆಗೆ ದಾಖಲಾಗುತ್ತಿದ್ದಾರೆ. ಕೆಲವೊಂದು ಸಂಶೋಧನೆಯ ಪ್ರಕಾರ, ಖಾಸಗಿ ಶಾಲೆಗಳು ಉನ್ನತ ಫಲಿತಾಂಶವನ್ನು ಸರ್ಕಾರಿ ಶಾಲೆಯ ಬೆಲೆಯಲ್ಲಿ ನೀಡುತ್ತಿವೆ. ಕೆಲವರು ಖಾಸಗಿ ಶಾಲೆಯು ಬಡ ಕುಟುಂಬಗಳಿಗೆ ಶಿಕ್ಷಣ ನೀಡುವಲ್ಲಿ ವಿಫಲವಾಗಿದೆ; ಕೇವಲ ಕೆಲವೇ ಜನರು ಖಾಸಗಿ ಶಿಕ್ಷಣವನ್ನು ಪಡೆಯುತ್ತಿದ್ದಾರೆಂದು ಹೇಳುತ್ತಾರೆ. ಅವರ ಪರವಾಗಿ ಹೇಳುವುದಾದರೆ, ಖಾಸಗಿ ಶಾಲೆಯು ಸಂಪೂರ್ಣ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಉದಾ:ವಿಜ್ಞಾನ ವಸ್ತು ಪ್ರದರ್ಶನ, ಸಾಮಾನ್ಯ ಜ್ಞಾನ, ಕ್ರೀಡೆ, ಸಂಗೀತ, ನಾಟಕ ಇತ್ಯಾದಿ. ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತವು ಉತ್ತಮವಾಗಿರುತ್ತದೆ. ಅದಕ್ಕಿಂತ ಹೆಚ್ಚಾಗಿ ಖಾಸಗಿ ಶಾಲೆಯಲ್ಲಿ ಮಹಿಳಾ ಶಿಕ್ಷಕರು ಹೆಚ್ಚು. ಖಾಸಗಿ ಶಾಲೆಯು ಅತ್ಯುನ್ನತ ಶಿಕ್ಷಕರನ್ನು ಹೊಂದಿರುತ್ತದೆ. ಇತ್ತೀಚಿನ ಡಿ.ಐ.ಎಸ್.ಇ. ಸಮೀಕ್ಷೆ ಪ್ರಕಾರ ಖಾಸಗಿ ಶಾಲೆಯಲ್ಲಿ ತರಬೇತಿ ಹೊಂದಿದ ಶಿಕ್ಷಕರ ಪ್ರಮಾಣ ಶೇ. 54.91 ಆದರೆ ಇದು ಸರ್ಕಾರಿ ಶಾಲೆಯಲ್ಲಿ ಶೇ. 44.88. ಸರ್ಕಾರಿ ಶಾಲೆಯಲ್ಲಿ ಶೇ. 43.44 ರಷ್ಟು ಶಿಕ್ಷಕರು ಸೇವಾ ನಿರತ ತರಬೇತಿಯನ್ನು ಪಡೆಯುತ್ತಾರೆ. ಆದರೆ ಕೇವಲ ಶೇ.2.32 ರಷ್ಟು ಶಿಕ್ಷಕರು ಅನುದಾನರಹಿತ ಶಾಲೆಯಲ್ಲಿ ಸೇವಾನಿರತ ತರಬೇತಿಯನ್ನು ಪಡೆಯುತ್ತಾರೆ. ಶಾಲೆ ಎಂಬ ಮಾರುಕಟ್ಟೆಯಲ್ಲಿ ಸ್ಪರ್ಧೆಯು ತೀವ್ರವಾಗಿದೆ. ಹೆಚ್ಚು ಖಾಸಗಿ ಶಾಲೆಗಳು ಲಾಭಕೇಂದ್ರಿತವಾಗಿವೆ. ಇದರಿಂದಾಗಿ ಸರ್ಕಾರಿ ಶಾಲೆಗಳನ್ನು ಒಂದೊಂದಾಗಿ ಮುಚ್ಚುತ್ತಿರುವುದು ಕಂಡುಬಂದಿದೆ. ಇದು ಆಘಾತಕಾರಿ ಸಂಗತಿಯಾಗಿದೆ.
ಸರ್ಕಾರಿ ಶಾಲೆಗಳನ್ನು ಉಳಿಸಿ ಅಭಿವೃದ್ಧಿಪಡಿಸುವ ಸತ್ಕಾರ್ಯದಲ್ಲಿ ನಾವೆಲ್ಲರೂ ಶ್ರಮಿಸಬೇಕಾಗಿದೆ.

(ಮುಂದುವರೆಯುವುದು...)

ವಿ. ರಾಜು
ಶಿಕ್ಷಣ ಪ್ರಕೋಷ್ಠ ಮುಖ್ಯಸ್ಥರು
ಕ.ರಾ.ಮಾ.ಶಿ.ಸಂ.



Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Posting 20th or 21st of every month

# ಚಿತ್ರ ಸುದ್ದಿ




ಬೆಳಗಾಂ ಜಿಲ್ಲಾ ಘಟಕದ ರಚನೆಯ ಸಭೆಯಲ್ಲಿ ಗಣ್ಯರು.



ಬೆಳಗಾಂ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು




ಸೆಪ್ಟೆಂಬರ್ 17 ಮತ್ತು 18 ರಂದು ಖಾನ್‌ಪುರದಲ್ಲಿ ನಡೆದ ಅಖಿಲ ಭಾರತೀಯ ಮಹಿಳಾ ಸಮನ್ವಯ ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಗಳು



ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸುತ್ತಿರುವುದು.

ಸಮಾಜಕ್ಕೆ ಏನೂ ಕೊಡದೆ ಅದರಿಂದ ಪಡೆಯುತ್ತಾ ಹೋದರೆ ಅದು ದುರ್ಬಲವಾಗುತ್ತದೆ. ಆದ್ದರಿಂದ ಸಮಾಜಕ್ಕೆ ಸಲ್ಲಿಸಬೇಕಾದುದು ಪ್ರತೀ ವ್ಯಕ್ತಿಯ ಆದ್ಯ ಕರ್ತವ್ಯ.

– ಪಂಡಿತ ದೀನದಯಾಳ್ ಉಪಾಧ್ಯಾಯ

ತಾಳ್ಮೆಯಿಂದ ಸಿಟ್ಟನ್ನು, ಒಳ್ಳೆಯದರಿಂದ ಕೆಟ್ಟದ್ದನ್ನು, ದಾನದಿಂದ ಜಿಪುಣತೆಯನ್ನು, ಸತ್ಯದಿಂದ ಸುಳ್ಳನ್ನೂ ಗೆಲ್ಲಬೇಕು.

– ಭಗವಾನ್ ಬುದ್ಧ

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 060-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು



srushtidesigns@gmail.com